HAVYAKA SANDESHA

ಹವ್ಯಕ ಸಂದೇಶ

A Monthly Newsletter of Havyaka Welfare Trust, Estd. 1964

Vol. XXl No. 10 | February 2014 | Pages 16 | **Rs. 2/-**

MARRIAGE MELA AND HAVYAKA SANSKAR & SANSKRITI DAY
ON 9TH FEBRUARY 2014.

KARKI VENKATRAMAN SHASTRI SURI AWARD PRESENTATION CEREMONY
ON 2ND MARCH 2014.

PAGE DONATED BY : ***M/S. METALLURGICAL SERVICES,*** *COURTESY :* ***SHRI RAMESH G. HEGDE,*** *MADAPPAN, KARKI, DADAR T. T. (Dec. 2013)*

"Havyaka Sandesha" is a monthly publication by **HAVYAKA WELFARE TRUST, Mumbai**
B-207, Valmiki Apartment, Sundar Nagar, Kalina, Vidyanagari P. O. Mumbai - 400 098 ✆2665 2591

Hon. Editor : Smt. Amita S. Bhagwat

Hon.Joint Editor : G. V. Bhagwat

Editorial Committee : R. N. Kameshwar, R. M. Shastri, Smt. Shashikala Hegde, Smt. Tanuja Hegde

Publisher : Narayan Akadas R. **Hon. Gen. Secretary**

Printed at : M/s. Navin Printers **Mumbai - 400 016.** **✆ 2430 8316**

Havyaka Welfare Trust (Estd. 1964) : is a charitable organisation dedicated to protect, preserve, promote, propagate & perpetuate art, science, Havyaka culture & traditional values among the members. The Trust runs medical centre at Dombivli at concessional rate and is open to all. DONATIONS TO 'HAVYAKA WELFARE TRUST' QUALIFY FOR TAX DEDUCTION UNDER SECTION 80 (G).

Membership of Havyaka Welfare Trust :
Patron (PT) Rs. 5010/-, benefactor (BN) Rs.3010/-, Sustaining Life Member (SL) Rs. 2010/-, Life Member (LM) 510/-, Patron Foreign Member US $ 150/-. Prescribed membership forms duly filled and sent with cash / local cheques for Greater Mumbai and DD for outsiders will be accepted.Cheque & DD shall be drawn in favour of "Havyaka Welfare Trust".

Publication : Authors are requested to send the materials in English / Kannada written or typed on one side of the page directly to Havyaka office addressed to the Editor "Havyaka Sandesha" or by e-mail. Topics published need not necessarily reflect the views of Havyaka Welfare Trust. Authors are solely responsible for Articles published under their name in the Havyaka Sandesha. Right to edit the material and publish rests with the Editorial Committee.

Change of Address : Members are requested to intimate the office in writing or through e-mail with their Membership No.

Managing Committee for the year 2011-2012

President : N. R. Hegde, Dombivli
Vice - President : Shivkumar P. Bhagwat
Hon. Gen. Secretary : Narayan Akadas
Hon. Jt. Secretary : R. M. Shastri, Dombivli
Hon. Treasurer : A. G. Bhat

Elected Members :

Smt. Tanuja Hegde, R. P. Hegde
Smt. Shashikala Hegde, R.N.Kameshwar
A. K. Bhat, Smt. Uma Swamy
M. G. Ramakrishna, Sanjay Bhat
Ramesh Vaidya

Co-opted Members :
Suresh Hegde, Keshav Hegde

ಸಂಪಾದಕೀಯ

ಕಾಣದ ಕಡಲು

ಬೀಸುತ್ತಿರುವ ಶಿಶಿರದ ಗಾಳಿಗೆ ಗಿಡಮರದ ಎಲೆಗಳು ಪಟಪಟನೆ ಹೊಡೆದುಕೊಳ್ಳುತ್ತಿವೆ. ಶಹರದ ಪರ್ಯಟನೆಗೆ ಹೊರಟರೆ ಎಲ್ಲಾ ದಿಕ್ಕಿನಿಂದಲೂ ಕಾಣುವ ಸಮುದ್ರ. ಕಪ್ಪು ಬಿಳುಪಿನ ಚಿತ್ರವನ್ನು ಜ್ಞಾಪಿಸುವಂತೆ ವಿಶೇಷ ಬಣ್ಣವಿಲ್ಲದ ಮುಂಬಯಿ ಸಮುದ್ರ, ಈ ಸಮಯದಲ್ಲಿ ನಸು ನೀಲಿಯೊಂದಿಗೆ ಬೆರೆತು ಇನ್ನಷ್ಟು ಸುಂದರವಾಗಿ ಕಾಣುತ್ತಿದೆ.

ಕನ್ನಡ ಸಾಹಿತ್ಯದ ಮೇರು ಕವಿ, ರಾಷ್ಟ್ರಕವಿ ಶಿವರುದ್ರಪ್ಪನವರು ಇನ್ನಿಲ್ಲ ಎನ್ನುವ ವಿಷಯ ತಿಳಿದು ದಿನಗಳೇ ಕಳೆದಿವೆ. ಅವರು ಸರಳ ಶಬ್ದಗಳಲ್ಲಿಯೇ ಭಾವನಾ ಪ್ರಪಂಚವನ್ನು ನಮ್ಮೆದುರು ತೆರೆದಿಟ್ಟು, ವಿನೂತನ ಅನುಭೂತಿಯೊಂದಿಗೆ ನಮ್ಮನ್ನು ವಿಸ್ಮಯಗೊಳಿಸಿದವರು. ಅವರ ನೆನಪಿನೊಂದಿಗೆ, ತುಟಿಗಳು ಚಲಿಸದಿದ್ದರೂ ನಮ್ಮ ಮನಸ್ಸು ಅವರ ಗೀತೆಗಳನ್ನು ಹಾಡತೊಡಗುತ್ತವೆ. ನನ್ನ ನೆಚ್ಚಿನ ಅವರ ಗೀತೆ 'ಕಾಣದ ಕಡಲಿಗೆ ಹಂಬಲಿಸಿದ ಮನ' ಮನಸ್ಸಿನಲ್ಲಿ ಮೊರೆಯುತಿದೆ.

ಮಿರಿ ಮಿರಿ ಮಿಂಚುವ ಕಡಲಿನ ಹೊರಮೈ ನೋಡಿದ ಮಾತ್ರಕ್ಕೆ ಅದರ ಆಳವನ್ನು ಅಳೆಯಬಹುದೆ? ಅದರೊಳಗಿನ ಮೀನು ತಿಮಿಂಗಿಲಗಳಂತಹ ಜಲಚರ ರಾಶಿಗಳನ್ನು ಊಹಿಸಬಹುದೇ? ಅದರ ಗರ್ಭದಲ್ಲಡಗಿರುವ ಮುತ್ತು ರತ್ನಗಳಿಗೆ ಬೆಲೆಗಟ್ಟಬಹುದೇ?

ಈ ಕಾವ್ಯಲೋಕವೂ ಕಡಲಿನಂತೆ ವಿಸ್ಮಯಕರ. ಅದರ ಸೆಳೆತವೂ ಕಡಲಿನಂತೆ ಉನ್ಮಾದಕರ. ಪ್ರತಿಬಾರಿ ಓದಿದಾಗಲೂ ಹೊಸ ಅರ್ಥಗಳೊಂದಿಗೆ ತೆರೆದುಕೊಳ್ಳುವ, ಒಮ್ಮೊಮ್ಮೆ ತನ್ನ ಅಗಾಧತೆಯ ಆಳಕ್ಕೆಳೆದುಕೊಳ್ಳುವ, ಇನ್ನೊಮ್ಮೆ ದಡಕ್ಕೆಸೆದು ಹಗುರಗೊಳಿಸುವ ನಿಗೂಢತೆ ಅದರಲ್ಲಿದೆ. ಜೀವನದ ವಿವಿಧ ಮಗ್ಗಲುಗಳನ್ನು ಅರ್ಥೈಸಿಕೊಳ್ಳುವ ಪ್ರಯತ್ನಕ್ಕೆ ಪೂರಕವಾಗಿಯೇ ಕಾವ್ಯಲೋಕವು ಬೆಳೆದು ಬಂದಿದೆ.

ಸೆಳೆಯುವ ಸೃಷ್ಟಿ ಸೌಂದರ್ಯ, ಕಾಡುವ ಸಮಾಜದ ಅಂಕುಡೊಂಕುಗಳು, ಆಂತರಿಕ ಹತಾಶೆ ದ್ವಂದ್ವ ಮೊದಲಾದ ಸಂಗತಿಗಳು ಕಾವ್ಯಮಯವಾಗಿ ಹೊರಹೊಮ್ಮಿದಾಗ ನಮ್ಮನ್ನು ತಟ್ಟುತ್ತವೆ, ಎಚ್ಚರಿಸುತ್ತವೆ. ನಮ್ಮ ಜೀವನದ ಮಿಡಿತ, ತುಡಿತಗಳು ಉಳಿದವರಿಗಿಂತ ಭಿನ್ನವೇ? ಕಾಲದ ಪ್ರವಾಹದಲ್ಲಿ ಅವೂ ತಿರುವು ಪಡೆದುಕೊಳ್ಳುತ್ತವೆಯೇ? ಜೀವನದ ಅರ್ಥ ಹುಡುಕುತ್ತಲೇ ವಿಶ್ವಪ್ರಜ್ಞೆಯಲಿ ಒಂದಾಗುವ, ವಿವೇಕದ ಉನ್ನತ ನೆಲೆಯನ್ನು ತಲುಪುವ ಪ್ರಯತ್ನ ಸಾಗುತ್ತಲೇ ಇರುತ್ತದೆ. ಈ ಹುಡುಕಾಟದ ಅಂಗವಾಗಿಯೇ ಅಲ್ಲವೆ ಕಲೆ, ಕಾವ್ಯ, ಸಾಹಿತ್ಯ, ಪರಮಾರ್ಥಕತೆಗಳೆಲ್ಲ ಹುಟ್ಟಿಕೊಂಡಿದ್ದು! ಇಂತಹ ಅಲೌಕಿಕತೆಯತ್ತ ಸೆಳೆಯುವ ಶಿವರುದ್ರಪ್ಪನವರ ಕವಿತೆಯ ಕೆಲವು ಸಾಲುಗಳು

"ಕಾಣದ ಕಡಲಿನ ಮೊರೆತದ ಜೋಗುಳ
ಒಳಗಿವಿಗೆಂದೂ ಕೇಳುತಿದೆ
ನನ್ನ ಕಲ್ಪನೆಯು ತನ್ನ ಕಡಲನೇ
ಚಿತ್ರಿಸಿ ಚಿಂತಿಸಿ ಸುಯ್ಯುತಿದೆ

ಹಾಗೆಯೇ ನವ್ಯ ಕಾವ್ಯದ ಹರಿಕಾರರಂದೇ ಹೆಸರಾದ ವಿ.ಜಿ. ಭಟ್‌ರ ಕಾವ್ಯ ಸೌಂದರ್ಯವನ್ನು ಓದಿಯೇ ಅನುಭವಿಸಬೇಕು. ಭಿನ್ನ ಭಿನ್ನ ಅರ್ಥವನ್ನು ಹೊಮ್ಮಿಸುವ ಅವರ ಕವನಗಳು ಒಮ್ಮೆಲೇ ತಿರುವು ಪಡೆದು ಕಣ್ಮರೆಯಾಗುವ ರೀತಿಯೇ ವಿನೂತನವಾದುದ್ದು. ಗಂಭೀರ ವಿಷಯವನ್ನಾದರೂ ಹಾಸ್ಯದ ಲೇಪದೊಂದಿಗೆ ಹೇಳುವ ಅವರ ರೀತಿಯೂ ವಿಶಿಷ್ಟವಾದುದು. ವಿಡಂಬನಾ ಕವಿ ಎಂದೇ ಹೆಸರಾದ ಅವರು ದಿನಕಳೆದಂತೆ ಮಾಗಿ ನಂತರದ ಕವನ ಸಂಕಲನಗಳಲ್ಲಿ ದಾರ್ಶನಿಕರಾಗಿಯೂ ಗೋಚರಿಸುತ್ತಾರೆ. ಅವರ ಸೊಸೆ ಡಾ. ಲಲಿತಾ ರಘುವೀರ ಭಟ್ ಪ್ರಕಟಿಸಿದ 'ವಿ. ಜಿ. ಭಟ್‌ರ ಆಯ್ದ ಕವನಗಳು' ಪುಸ್ತಕದ ಬಗ್ಗೆ ಪ್ರಸಿದ್ಧ ಕವಿ ಡಾ. ಜಯಂತ್ ಕಾಯ್ಕಿಣಿಯವರು ಬರೆದ ವಿಮರ್ಶೆಯು ಈ ಸಂಚಿಕೆಯಲ್ಲಿದೆ. ವಿ. ಜಿ. ಭಟ್‌ರ ಅಗಾಧವಾದ ಕಾವ್ಯ ಸಂಪತ್ತಿನ ಕಿರುಪರಿಚಯವಿದು.

e-mail : amitabhagwat@gmail.com

ಅಮಿತಾ ಎಸ್ ಭಾಗವತ್

PRESIDENT'S MESSAGE

Dear friends,

Picturesque spot, freshness in the air and overwhelming enthusiasm of our members made our picnic to Nandanvan Resort a memorable one. True to the spirit of Golden Jubilee Year, the attendance of members was very good. Different games envisaged for different age groups made the event very interesting. We thank everyone who has taken interest in organizing the picnic and all those who have attended it, as not only it is a stress buster but also promotes harmony. We are very happy that our past president, beloved Vimalakka came from Bengaluru and participated in the picnic. There were also other senior members who boosted our enthusiasm by their presence. The participation of our members in various games and the skill exhibited by them on the dance floor, arranged during picnic proves that we have no dearth of talents. We are also happy that the members are showing their interest to participate in various competitions to be held as a part of Golden Jubilee celebration. We expect the same enthusiasm in participating in Grand Finale to be held on 14th September.

In all programs of our Golden Jubilee Year, we begin the program by reciting the Theme song written by Smt Shashikala Hegde and composed by Smt. Aparna Bhat, by holding our hands. The somg is already recoreded. As per the suggestion of many members, the theme song is featured in this issue of Havyaka Sandesha, so that our members can memorize and sing during the function.

A full day function has been arranged on 9th Fabraury, 2014 along with Marriage Mela. We have invited Shri Vidwan Nagendra Bhat, Hitlalli to speek on Havyaka Sanskara. We once again bring to your notice that various competitions like cooking, group singing, dancing etc will be held on that day. We are sure it will be a great pleasure to watch.

On 2nd March we will honour Shri Manohar Prasad, Sub editor of Udayavani by conferring Karki Venkataraman shastry Award. We also plan to have Yakshagana from Keremane Mela.

We request you all to attend the function in large number.

We are planning to finalize the transaction of purchasing Havyakara Hall by the end of March 2014. We will keep you posted about the development.

We take this opportunity to appeal to all who are talented to register their names for the participation in the grand finale to be held on 14th September, 2014.

With warm regards.

N.R. Hegde
President

ಸಂಪಾದಕರಿಗೆ ಪತ್ರ

ಸಂಪಾದಕರು,
ಹವ್ಯಕ ವೆಲ್ಫೇರ್ ಟ್ರಸ್ಟ್, ಕಲಿನಾ

ಶ್ರೀಮತಿ ಶಾಂತಾ ಶಾಸ್ತ್ರಿಯವರು ಬರೆದ "ಮೊದಲ ಬೆಳಿ" ಕವನ ಸಂಕಲನವನ್ನು ಓದಿದೆನು. ಮತ್ತೊಮ್ಮೆ ಮಗುದೊಮ್ಮೆ ಓದಿದೆನು. ಈ ಕವನ ಸಂಕಲನ ಬಾಂಧವ್ಯ, ಭಕ್ತಿ ಮುಕ್ತಿ ಸಾಮಾಜಿಕ ಕಳಕಳಿ, ದೇಶ ಭಕ್ತಿ, ನಿಸರ್ಗ ಪ್ರೀತಿ ಮತ್ತು ಸ್ತ್ರೀಶಕ್ತೀಕರಣದ ಒಗ್ಗರಣೆಯಿಂದ ಸವಿಯಲು ರುಚಿಕಟ್ಟಾದ ಮೇಲೊಗರವಾಗಿದೆ. ಇಂಥ ಕೃತಿಗಳು ಮೇಲಿಂದ ಮೇಲೆ ಇವರಿಂದ ಹೊರಬರಲೆಂದು ಹಾಗೂ ಇನ್ನೂ ಘಮಘಮಿಸಲೆಂದು ಹಾರೈಸುತ್ತೇನೆ.

– ಸುಮಿತ್ರ ವಿಷ್ಣು ಭಟ್, ಡೊಂಬಿವಿಲಿ

ಹವ್ಯಕ ವೆಲ್ಫೇರ್ ಟ್ರಸ್ಟ್, ಮುಂಬೈ
HAVYAKA WELFARE TRUST, MUMBAI

''ಕರ್ಕಿ ವೆಂಕಟರಮಣ ಶಾಸ್ತ್ರಿ ಸೂರಿ'' ಪ್ರಶಸ್ತಿ ಪ್ರದಾನ ಸಮಾರಂಭ-2014
"Karki Venkataraman Shastri Suri" Award Presentation Ceremony - 2014

DATE : 2-3-2014 TIME : 10.00 A.M. 6.00 P.M.
Venue : Vishweshwarayya Hall, Karnataka Sangha, Matunga (W), Mumbai-400 016.

ಸಹಕಾರ / Co-operation	ಕರ್ನಾಟಕ ಮಲ್ಲ, ಕನ್ನಡ ದೈನಿಕ ಮುಂಬೈ Karnataka Malla, Kannada Daily Paper, Mumbai
ಪ್ರಶಸ್ತಿ ಪ್ರದಾನರು / Awardee	ಶ್ರೀ ಮನೋಹರ ಪ್ರಸಾದ (ಪ್ರಖ್ಯಾತ ಪತ್ರಕರ್ತರು) Shri MANOHAR PRASAD (Eminent Journalist)
ಮುಖ್ಯ ಅತಿಥಿಗಳು / Chief Guest	ಶ್ರೀ ಎನ್. ಆರ್. ಹೆಗಡೆ, ರಾಗೋಣ, ಬೆಂಗಳೂರು Shri N. R. HEGDE, Ragaon- (Director-UNDIDOC, Bengaluru)
ಗೌರವ ಅತಿಥಿಗಳು / Guest of Honour	ಶ್ರೀ ಚಂದ್ರಶೇಖರ ಪಾಲೆತ್ತಾಡಿ (ಸಂಪಾದಕರು, ಕರ್ನಾಟಕ ಮಲ್ಲ) Shri CHANDRASHEKHAR PALETTADI (Editor, Karnataka Malla) ಶ್ರೀ ಶಿಮುಂಜೆ ಪರಾರಿ (ಸಾಹಿತಿ, ನಾಟಕಕಾರರು) Shri SHIMUNJE PARARI (Writer, Dramatists)
ಅಧ್ಯಕ್ಷತೆ / Chairperson	ಶ್ರೀ ಎನ್. ಆರ್. ಹೆಗಡೆ (ಅಧ್ಯಕ್ಷರು, ಹವ್ಯಕ ವೆಲ್ಫೇರ್ ಟ್ರಸ್ಟ್, ಮುಂಬೈ) Shri N. R. HEGDE (President, HWT, Mumbai)
ಮನೋರಂಜನಾ ಕಾರ್ಯಕ್ರಮ	ಮಧ್ಯಾಹ್ನ ಗಂಟೆ 2.30ರಿಂದ 6.00ರ ವರೆಗೆ

ಯಕ್ಷಗಾನ 'ಸುಭದ್ರಾ ಕಲ್ಯಾಣ'
ಇಡಗುಂಜಿ ಶ್ರೀ ಮಹಾಗಣಪತಿ ಯಕ್ಷಗಾನ ಮಂಡಳಿ, ಕೆರೆಮನೆ ಇವರಿಂದ

ಸರ್ವರಿಗೂ ಆದರದ ಆಮಂತ್ರಣ

ಕಾರ್ಯಕ್ರಮಗಳ ವಿವರ / Programme Schedule

10.00 am to 10.30 am	:	Breakfast
10.30 am to 11.30 am	:	Aarati Thali Competition Age upto 15 years boys & girls Age above 15 years male & female
11.30 am to 1.30 pm	:	Award Ceremony (Stage Programme) Felicitation to all Kannada Sangha, Mumbai
1.30 pm to 2.30 pm	:	Lunch break
2.30 pm to 6.00 pm	:	Yakshagana

ಶ್ರೀ ಎನ್. ಆರ್. ಹೆಗಡೆ (ಅಧ್ಯಕ್ಷರು)
ಶ್ರೀ ನಾರಾಯಣ ಅಕದಾಸ (ಗೌ. ಕಾರ್ಯದರ್ಶಿಗಳು)
ಹವ್ಯಕ ವೆಲ್ಫೇರ್ ಟ್ರಸ್ಟ್

ಶ್ರೀಮತಿ ತನುಜಾ ಹೆಗಡೆ (ಸಂಚಾಲಕರು,
ಕರ್ಕಿ ವೆಂಕಟರಮಣ ಶಾಸ್ತ್ರಿ ಸೂರಿ ದತ್ತಿ ಕಾರ್ಯಕ್ರಮ)

*PAGE DONATED BY : **HEGDE HOSPITAL,** CHEMBUR, COURTESY : **DR. DINESH HEGDE** (DEC.-2013)*

ಪುಸ್ತಕ ವಿಮರ್ಶೆ

✍ ಜಯಂತ ಕಾಯ್ಕಿಣಿ

ವಿ. ಜಿ. ಭಟ್ಟರ ಆಯ್ದ ಕವನಗಳು

ಸಂಪಾದಕರು : ಕುಮುದಾ ಜಿ. ಎಂ.
ಪುಟ : 312, ಬೆಲೆ : ರೂ. 300/-
ಪ್ರಕಾಶನ : ರುಕ್ಮಿಣಿ ಪ್ರಕಾಶನ,
4/1, ಸೀಮಾ, ಎನ್. ದತ್ತಾ ಮಾರ್ಗ,
ಅಂಧೇರಿ (ಪ), ಮುಂಬಯಿ - 400 058.

ಇರುವ ಕಂಬನಿಯೆಲ್ಲ ಈಗಲೇ ಹರಿಸದಿರು
ನಾ ಸತ್ತ ಮೇಲೆ ಉದುರಿಸಲು ಬೇಡವೆ ಅಷ್ಟು
ಹತ್ತು ಮಂದಿಯೆದುರು ಮಣ್ಣಿನಲ್ಲಿ?
(ಕಣ್ಣೀರು)
ಅದರ ಅಪ್ಪ ಬಹಳ ದಪ್ಪ
ಪುಸ್ತಕವನು ಬರೆಯಿತು
ಅದನು ಏರಿ ಕೆಳಗೆ ಹಾರಿ
ಅದರ ಕಾಲು ಮುರಿಯಿತು,
(ಮಂಗನ ಅಪ್ಪನ ಮಹಾಗ್ರಂಥ)

ಇಂಥ ಅಪ್ಪಟ ಅನುಭವಜನ್ಯ ವಕ್ರೋಕ್ತಿಯ, ಸರಳ ಸಹಜ ವಿವೇಕದ ಸಾಲುಗಳು ವಿ. ಜಿ. ಭಟ್ಟ (1923-1991) ಅವರದಲ್ಲದೆ ಇನ್ನಾರದಾಗಲು ಸಾಧ್ಯ? ನಮ್ಮ ಕೋಲ್ಮಿಂಚಿನಂಥ ಪ್ರಖರ, ನಿಖರ ಪ್ರತಿಭೆಯಿಂದ ಕನ್ನಡ ಸಂವೇದನೆಯನ್ನು ಹಿಗ್ಗಿಸಿದ ಅಪರೂಪದ ಕವಿ ವಿ. ಜಿ. ಭಟ್ಟರಿಗೆ ಅವರೇ ಹೋಲಿಕೆ. ಉತ್ತರ ಕನ್ನಡದ ಶರಾವತಿ ಸೆರಗಿನ ಕಡತೋಕಾದಲ್ಲಿ ಹುಟ್ಟಿದ ವಿ. ಜ. ಭಟ್ಟರು, ಹೊನ್ನಾವರ, ವಿಜಾಪುರ, ಸಾಂಗ್ಲಿ, ಕೊಲ್ಲಾಪುರಗಳಲ್ಲಿ ಓದಿ ನಂತರ, ಮುಂಬಯಿಯಲ್ಲಿ ಖಾದೀ ಗ್ರಾಮೋದ್ಯೋಗ ಸಂಸ್ಥೆಯಲ್ಲಿ ಸೇವೆ ಸಲ್ಲಿಸಿ ಬದುಕನ್ನು ಪೂರೈಸಿದವರು.

ಕಡು ಬಡತನದ ಎಳವೆಯ ದಿನಗಳ ನೆನಪುಗಳೆಂದೂ ನಂಜಾಗಿಸಿ ಕೊಳ್ಳದೆ, ಸೂಕ್ಷ್ಮವಾದ ವಿನೋದದಿಂದ ಆತ್ಮ ಲೇವಡಿಯಿಂದ ಮಾಗುತ್ತಾ ತಮ್ಮದೇ ಹದದಲ್ಲಿ ಹರಿತಗೊಂಡವರು. ಅವರ ಕಾವ್ಯವೇದನೆ (1951) ಕನ್ನಡಕ್ಕೆ ಆಧುನಿಕ ಮನೋಧರ್ಮದ ಆಗಮನ ಸಾರಿದ ಮೊದಲ ಸಂಕಲನ ಎಂದು ಹೇಳಬಹುದು. ತಮ್ಮ ಸೂಕ್ಷ್ಮ ವಿಡಂಬನೆಯ ಸೂಜಿಮಲ್ಲಿಗೆಯಿಂದ ನಿತ್ಯದ ಪೊಳ್ಳು ಬಲೂನುಗಳನ್ನು, ಮುಖವಾಡಗಳನ್ನು, ವೇಷಗಳನ್ನು ಚುಚ್ಚುತ್ತಲೇ ಸರಳ ಸಂಸಾರಿಯ ಪಾತ್ರಗಳ ಮೂಲಕವೇ ಅನುಭಾವಿಯಾಗಿ ಬೆಳಕನ್ನು ಬೆಂಬತ್ತಿ ಅರಿಯುತ್ತಲೆ ನಡೆದ ವಿ. ಜಿ. ಭಟ್ಟರ ಸಾವಿರಾರು ಕವಿತೆಗಳು 23 ಸಂಕಲನಗಳಲ್ಲಿ ಪ್ರಕಟಗೊಂಡವು.

ಆದರೆ, ಮುಖ್ಯ ಆಖ್ಯಾನದಿಂದ ಆಚೆಗೇ ಉಳಿದ ಯಕ್ಷಗಾನದ ಕೋಡಂಗಿಯಂತೆ, ಮುಂಬಯಿಯಲ್ಲಿ ಅಜ್ಞಾತವಾಸದಲ್ಲಿಯೇ ಮುಗುಳು ನಗುತ್ತ ಬರೆದುಕೊಂಡಿದ್ದ ವಿ. ಜಿ. ಭಟ್ಟರ ಬಗ್ಗೆ ನಮ್ಮ ಸಾಹಿತ್ಯದ ಜಾಯಮಾನ ಅಂಥ ಎಚ್ಚರ, ಸ್ಪಂದನ ತೋರಿಸಿದಂತಿಲ್ಲ! ದಿನಕರ ದೇಸಾಯಿಯಂತೆ ವಿಡಂಬನೆಯ ಮೂಲಕವೇ, ಮೂರ್ತಿ ಭಂಜನೆಯ ಮೂಲಕವೇ ಸಾಮಾಜಿಕ ಅಸಮಾನತೆಯ ಕುರಿತು ಎಂದೋ ಬಂಡಾಯವೆದ್ದ ಈ ಕವಿಯ ಕುರಿತು ಬಂಡಾಯ ಚಳವಳಿಯ ಹೆಚ್ಚಿನ ಬರಹಗಾರರಿಗೂ ಗೊತ್ತಿದ್ದಂತಿಲ್ಲ. ಲಂಕೇಶರು ತಮ್ಮ ಅಕ್ಷರ ಹೊಸ ಕಾವ್ಯದಲ್ಲಿ ವಿ. ಜಿ. ಭಟ್ಟರನ್ನು ಸೇರಿಸಿ, ಉತ್ಸಾಹದ ಮಾತು ಗಳನ್ನಾಡಿದ್ದರಿಂದ, ಅವರ ಆತ್ಮಬೋಧನೆಯಂಥ ರಚನೆ ಕೆಲವರ ಮನಸ್ಸಿನಲ್ಲಿ ಉಳಿಯುವಂತಾಯಿತು. (ಆತ್ಮವನ್ನು ಅಲ್ಲಿ ಇಲ್ಲಿ ಹೂವಲ್ಲಿ, ಮಕ್ಕಳ ಕಂಗಳಲ್ಲಿ ಅರಸುತ್ತ ಅದು ಎಲ್ಲೂ ಸಿಗದೆ ಕೊನೆಗೆ ಕಿಟೆಲ್ ಕೋಶದ ನೂರಾ ಐವತ್ತಮೂರನೇ ಪುಟದಲ್ಲಿ ಸಿಗುವ ವ್ಯಂಗ್ಯ ಈ ಕವಿತೆಯಲ್ಲಿದೆ). ಅವರ ಗಂಡಿಗೆ ಪದ್ಯಕ್ಕೆ ಮಿಗಿಲಾದ ಸ್ತ್ರೀವಾದಿ ಪದ್ಯ ಬೇರಿಲ್ಲ. ವಿವಾಹ ಬಾಹಿರ ಆಕರ್ಷಣೆಯ ಕುರಿತೂ ಸೂಕ್ಷ್ಮ ತುಂಟತನದಿಂದ ಬರೆದ ಮೊದಲ ಕವಿಯೂ ಇವರೇ! (ಉತ್ತರಕಾಂಡ, ಸಂಕಲನ).

ಭಟ್ಟರ ಬಂಡಾಯ ಗುಣದಿಂದಾಗಿಯೇ, ಬಹುಶಃ ಪ್ರಗತಿಶೀಲರ ಬಂಧುವಾಗಿದ್ದ ನಿರಂಜನರಿಗೆ ಅವರ ಬಗ್ಗೆ ವಿಶೇಷ ಒಲವಿತ್ತು. ಮುಂಬಯಿಗೆ ಬಂದಾಗೆಲ್ಲ ನಿರಂಜನ ಮತ್ತು ಅನುಪಮಾ ಭಟ್ಟರಲ್ಲಿಯೇ ಇರುತ್ತಿದ್ದರು. ಇದಕ್ಕೂ ಮುನ್ನ ಧಾರವಾಡದಲ್ಲಿದ್ದಾಗಲೂ ಬೇಂದ್ರೆಯವರ ಗಂಭೀರ ಕಾವ್ಯ ಭಂಗಿಯ ಕುರಿತು ಆರೋಗ್ಯಕರ ವಿನೋದ ಮಾಡುವ ಧೈರ್ಯ ತೋರಿದ ಮೊದಲಿಗ ಈ ಭಟ್ಟರೇ.

ಅವರದೊಂದು ಚುಟುಕದಲ್ಲಿ ಯಾರೋ, ಕವಿಯೊಬ್ಬರ ಬಳಿ ಬಂದು ಕವಿತೆಯ ಅರ್ಥ ಕೇಳ್ತಾನೆ. ಆಗ ಕವಿ ಕೂಡಲೇ ನೋಡಿದನು ಕೀರ್ತಿಯತ್ತ! ಅಂತ ಭಟ್ಟರು ಬರೀತಾರೆ. ಇಲ್ಲಿ ಕವಿ ಕೀರ್ತಿ ಯಾರು ಅಂತ ಊಹಿಸುವಷ್ಟಾದರೂ ಧೈರ್ಯವನ್ನು ಅವರು ಓದುಗರಿಗೆ ಬಿಟ್ಟಿದ್ದರು. ತವರಿಂದ ಮಡದಿಗೆ ಬೇಗ ಮರಳಲು ವಿನಂತಿಸಿದ ಗೃಹಸ್ಥನೊಬ್ಬನ ಕವಿತೆಯೂ ತುಂಬಾ ಜನಪ್ರಿಯವಾಗಿತ್ತು. ಅವನು ಹೇಳುತ್ತಾನೆ-

ಚಳಿಗಾಲವಾದರೂ ನಮಗೇನು? ರಗ್ಗುಂಟು
ಬೆಚ್ಚಗಿದೆ ನಿನಗಿಂತ ನೂರುಪಟ್ಟು
ಪಾಪ ಬೆಕ್ಕಿನ ಮರಿಯು ಕೂಗಿ ಸಾಯಲು ಬಿತ್ತು
ಒಲೆ ಬೆಚ್ಚಗಿಲ್ಲದೆಯೆ ದಿಕ್ಕುಗೆಟ್ಟು.

ಎದೆ ಬೆಚ್ಚಗಾಗಿಸುವ ಇಂಥ ಅಸಂಖ್ಯ ಸಾಲುಗಳು ಭಟ್ಟರ ಕಾವ್ಯದ ಕೈತೋಟದಲ್ಲಿ ಸಿಗುತ್ತವೆ. ಅವರ ಪಲಾಯನ, ತುಂಟನ ಪದಗಳು, ಕಾವ್ಯ ವೇದನೆ, ಕಿಷ್ಕಿಂದೆ, ಆತ್ಮಗೀತೆ, ಲಹರಿ, ಉತ್ತರಕಾಂಡ, ಮರಳಿ ಬಂದ ಕವಿತೆ-ಇಂಥ 23 ಸಂಗ್ರಹಗಳ ಸಾವಿರಾರು ಕವಿತೆಗಳಿಂದ, 400 ಕವಿತೆಗಳನ್ನು ಆಯ್ದು ಶಿರಸಿಯ ಕುಮುದಾ ಜಿ. ಎಂ. ಒಂದು ಅಮೂಲ್ಯ ಸಂಕಲನವನ್ನು ಈಗ ಸಂಪಾದಿಸಿದ್ದಾರೆ. ಭಟ್ಟರ ಸೊಸೆ ಡಾ. ಲಲಿತಾ ರಘುವೀರ ಭಟ್ಟ ಅದನ್ನು ಪ್ರಕಟಿಸಿದ್ದಾರೆ. ಇವರಿಬ್ಬರನ್ನೂ ಈ ವಾತ್ಸಲ್ಯಪೂರ್ಣ ಅಷ್ಟೇ ಅರ್ಥಪೂರ್ಣ ಸಕಾಲಿಕ ಸಾಹಸಕ್ಕಾಗಿ ಎಷ್ಟು ಅಭಿನಂದಿಸಿದರೂ ಸಾಲದು.

ಕವಿತಾ ಬಂದಾಗ ಬರೇತೇನೆ
ಬರದಿದ್ರೆ ಗೊರೇತೇನೆ
ಇವನ ಗುರ್ತಿದೆ ಅಂತ ಬರ್ತದೇ!

ಅಂತಾರೆ ಭಟ್ಟರು. ಕವಿತೆಗೆ ಭಟ್ಟರ ಗುರ್ತಿದೆಯಂತೆ. ಆದರೆ ನಮಗೇ ಅವರ ಗುರ್ತಿರದೆ ಹೋದರೆ ಹೇಗೆ? ಈ ಪುಸ್ತಕ ನಮಗೆಲ್ಲ ತುರ್ತಾಗಿ ಬೇಕಾಗಿರುವ ಅಂಥ ಗುರ್ತಿಗೆಂದೇ ಬಂದಿರುವ ಕೊಡುಗೆ, ಅವರ ಯಾನದ ಅದೃಶ್ಯ ಗ್ರಾಫ್ ಒಂದನ್ನು ಈ ಸಂಕಲನದಲ್ಲಿ ನಾವು ಮನಗಾಣ ಬಹುದಾಗಿದೆ.

ಈಗ ನಿನಗೆ ಕೊಟ್ಟ ಮುದ್ದು ಹೋಯಿತೆಲ್ಲಿಗೆ? ಎಂದು ಮೊದಲ ಸಂಕಲನದಲ್ಲಿ ನಲ್ಲೆಯನ್ನು ಕೇಳುವ ಈ ತುಂಟ ಕ್ರಮೇಣ ತನ್ನ ಯಾನದಲ್ಲಿ ಈ ಗಾಳಿಯ ಬೆನ್ನ ಮೇಲೆ, ಮೂರ್ತಿಯೊಂದ ಕೆತ್ತಬೇಕು ಎನ್ನುವ, ಶೂನ್ಯದ

ನೆಂಟನಾಗುತ್ತಾನೆ. ಪೂರ್ಣ ಮಾನವನ ನಿರ್ಮಾಣದಲ್ಲಿ ಅವಿರತ ಸುರತನು, ಸೃಜನದಿ ನಿರತನು ಆಗಿರುವ ಪರಮಾತ್ಮನು ತನ್ನ ಕಾರ್ಖಾನೆಯ ಅರೆ ಬರೆ ಅಪೂರ್ಣ ಮಾನವರನ್ನು (rejections) ಭೂಮಿಗೆಸೆಯುತ್ತಾನಂತೆ! ಪರಮಾತ್ಮನ ಹಾಡು ಅದಾದರೆ ಕವಿಯೆಂಬ ಸೃಷ್ಟಿಶೀಲನ ಪಾಡೇನು?

ಗೊಮ್ಮಟನಂತಹ ಆಕೃತಿ ಕಟೆಯಲು
ಇಲ್ಲವು ಈತ ಸಮರ್ಥ
ಚಿಣ್ಣರಾಡಲಿಕೆ ಮಣ್ಣಿನ ಗೊಂಬೆಯ
ರಚಿಸಿಯೆ ಆದ ಕೃತಾರ್ಥ

ಹೇಗೂ ತನ್ನ ಕಿಸೆಗೆ ಬಂದ ಖೊಟ್ಟಿ ನಾಣ್ಯವೊಂದನ್ನು ಚಲಾಯಿಸ ಲಾಗದೆ. ಕುರುಡನ ಕೈಗೂ ಕೊಡಲಾಗದೆ, ಕೊನೆಗೆ ದೇವರ ಡಬ್ಬಿಗೆ ಹಾಕುವ ಪ್ರಯತ್ನವು ಮಾರ್ಮಿಕವಾಗಿದೆ. ದೇವರು, ಮಂತ್ರಗಳು, ಸ್ವಾಮಿಗಳು ಪದೇ ಪದೇ ಭಟ್ಟರ ಕಿಡಿ ನೋಟಕ್ಕೆ ತುತ್ತಾಗುತ್ತಾರೆ. (ಇವೆಲ್ಲಾ 1950-1970ರ ನಡುವಿನ ರಚನೆಗಳು ಎಂಬುದನ್ನು ಗಮನಿಸಬೇಕು. ಆಗ ರಮ್ಯ ಮತ್ತು ನವ್ಯದ ಉಲ್ಬಣದ ಕಾಲ) ವಿಮರ್ಶಕ ಎಚ್. ಆರ್. ಅಮರನಾಥ್ ವಿ. ಜಿ. ಭಟ್ಟರ ಬಗ್ಗೆ ವಿದೂಷಕ ಅವಧೂತವಾದ ಬಗ್ಗೆ ಎಂದು ಬರೆದಿದ್ದರು. ಬಹುಶಃ ಭಟ್ಟರ ಕಾವ್ಯಕ್ಕೆ ಇದಕ್ಕಿಂತ ಸೂಕ್ಷ್ಮ ವ್ಯಾಖ್ಯೆ ಬೇರಿಲ್ಲ.

ಇಲ್ಲಿಯ ಕವಿತೆಗಳಲ್ಲಿ ಒಂದೋ ಅವಧೂತ ವಿದೂಷಕನ ವೇಷದಲ್ಲಿರುತ್ತಾನೆ. ಅಥವಾ ವಿದೂಷಕನ ಅಂಗಿಯಲ್ಲಿರುತ್ತಾನೆ. ಇನ್ನೇನು ಕವಿತೆ ದಾರ್ಶನಿಕ ಭಂಗಿ ತಾಳುತ್ತದೆ ಅನ್ನುವಷ್ಟರಲ್ಲಿ ಯಾವುದೇ ಸಾಲಿನಲ್ಲಿ ಭಟ್ಟರು ಚಾಪ್ಲಿನ್‌ನಂತೆ ಕಣ್ಣು ಹೊಡೆದು ಬಿಡುತ್ತಾರೆ. ಆಗ ಉಂಟಾಗುವ ಬಿಡುಗಡೆಯೇ ಇವರ ರಚನೆಗಳ ಜೀವಾಳವಾಗಿದೆ. ಭಟ್ಟರ ಕಾವ್ಯ ಜೀವನದ ಉತ್ತರಾರ್ಧದಲ್ಲಿ ಅವಧೂತನೇ ಹೆಚ್ಚು ದಾದಾಗಿರಿ ನಡೆಸಿದಂತಿದೆ. ನನಗಂತೂ ಅವರ ವಿದೂಷಕ ಪಾತ್ರವೇ ಹೆಚ್ಚು ಆಪ್ತ.

Sublime ಮತ್ತು rediculousಗಳ ಕಲ್ಬೆರಕೆಯ ಆಕಸ್ಮಿಕ ವಿಸ್ಮಯವೇ ವಿ. ಜಿ. ಭಟ್ಟರ ವೈಖರಿ ಎಂದು ಗೌರೀಶ ಕಾಯ್ಕಿಣಿ ಮೂವತ್ತು ವರ್ಷಗಳ ಹಿಂದೆ ಹೇಳಿದ್ದು ಖಂಡಿತ ಉತ್ಪ್ರೇಕ್ಷೆಯಲ್ಲ ಅಂತ ಈಗ ಭಟ್ಟರನ್ನು ಓದುವಾಗ ಹೆಚ್ಚು ಮನವರಿಕೆ ಆಗುತ್ತಿದೆ. ಇದೇ ಭಟ್ಟರು ಮನಸ್ಸನ್ನು ಸದ್ದಿರದೆ ಸಂತೈಸಬಲ್ಲಂಥ ಪ್ರಶಾಂತ ಕವಿತೆಗಳನ್ನು ಬರೆಯುತ್ತಾರೆ, ಉದಾಹರಣೆ

ಗೂಡು ಕಟ್ಟುವ ಕಾಗೆ ಕಂಡೆ
ಗುಟುಕು ನೀಡುವ ಗುಬ್ಬಿ ಕಂಡೆ
ತೊಟ್ಟಿಲಲಿ ನಿದ್ರಿಸಿದ ಹಸುಳೆಯು
ನಸು ನಗುವುದನು ಕಂಡೆನು
ಧಾರೆಯೆರೆಯುವ ಕೈಯ ಕಂಡೆ
ಸತ್ಯ ನುಡಿಯುವ ಮುಖವ ಕಂಡೆ
ಅಮರಲೋಕದ ಕಿಟಕಿಯಂತಹ
ಕಂಗಳನು ಸಹ ಕಂಡೆನು

(ಕಂಡೆ)
ಶಬ್ದಗಳಲ್ಲೇ ಅರ್ಥವ ಹುಡುಕುವ
ಶ್ರಮವೆಲ್ಲಾ ತಿಳಿ ವ್ಯರ್ಥ
ನಿನ್ನೊಳಗೇನೆ ಸುಪ್ತವಾಗಿಹುದು
ಎಲ್ಲದಕೂನೂ ಅರ್ಥ
ನಿದ್ದೆ ಹೋದ ಅರ್ಥಗಳನ್ನು ಎಚ್ಚರ
ಗೊಳಿಸಲು ಬರುವವು ಶಬ್ದ
ಅರ್ಥಗಳಿಗೆ ಸಹ ಸಮಾಧಿ ಹತ್ತಿರ
ಶಬ್ದ ಬಂದರೂ ಸ್ತಬ್ಧ

(ಶಬ್ದ, ಅರ್ಥ)
ಹಳೆಯ ಕಟ್ಟಿಗೆಯ ಲೇಸು ಉರಿಯಲಿಕೆ
ಹಳೇ ಗ್ರಂಥಗಳು ಅರಿಯಲಿಕೆ
ಹಳೆಯ ಮಿತ್ರರೇ ಲೇಸು ಬರೆಯಲಿಕೆ
ವಿಶ್ವಾಸದಿ ಎದೆ ತೆರೆಯಲಿಕೆ

(ಲೇಸು)
ಕನ್ನಡದ ಹೊಸ ಮನಸ್ಸುಗಳು ಅವಶ್ಯವಾಗಿ ವಿ. ಜಿ. ಭಟ್ಟರನ್ನು ಓದಬೇಕು. ಯಾವ ಸಾಮಯಿಕ ಚಳವಳಿಗೂ, ಮೇಲ್ಪದರಿನ ಆಮಿಷಗಳಿಗೂ ಒಳಗಾಗದೇ, ತನ್ನದೇ ಸಾಕ್ಷಿ ಪ್ರಜ್ಞೆಯ ಸೊಲ್ಲುಗಳ ಮೂಲಕವೇ, ತನ್ನದೇ ಆದ ಕಾವ್ಯಮಾನವನ್ನು ಅತ್ಯಂತ ಲವಲವಿಕೆ, ಎಚ್ಚರ ಮತ್ತು ನಿರಹಂಕಾರದಿಂದ ನಡೆಸಿದ ಭಟ್ಟರ ಕಾವ್ಯ ವೈಖರಿಯನ್ನು ಮತ್ತೆ ಮತ್ತೆ ಆಸ್ವಾದಿಸುವುದು ನನ್ನ ಪಾಲಿಗಂತೂ ಒಂದು ಚಿಕಿತ್ಸಕ ಸಂಗತಿಯಾಗಿದೆ. ಈ ಪುಸ್ತಕ ಬಂದಲಾಗಾಯ್ತಿನಿಂದ ನನ್ನ ಕೈಗಳು ಮತ್ತೆ ಮತ್ತೆ ಈ ಪುಸ್ತಕವನ್ನು ತೆರೆಯುತ್ತಿದೆ. ಕೊನೆತನಕವೂ ತನ್ನ ಹುರಿಯನ್ನೂ, ಹಿಡಿಯನ್ನೂ ಹಾಗೇ ಇಟ್ಟುಕೊಂಡ ವಿ. ಜಿ. ಭಟ್ಟರ ಕೊಟ್ಟ ಕೊನೆಯ ಪದ್ಯದ ಕೆಲ ಸಾಲುಗಳೊಂದಿಗೆ ಈ ಟಿಪ್ಪಣಿ ಮುಗಿಸುತ್ತೇನೆ.

ಪ್ರಾರ್ಥನೆ (ಅಂತಿಮ)
ಒಂದೇ ಪ್ರಾರ್ಥನೆ ಪ್ರಭುವೇ ಲಾಲಿಸು
ಲಾಲಿಸಿದರೆ ಮಾತ್ರಾ ಸಾಲದು, ಪರಿಪಾಲಿಸು
ಒಂದೇ ತುತ್ತನು ಸರೀ ಜಗಿದು ನುಂಗುವ ಮುಂಚೇ
ಇನ್ನೊಂದನು ನಾ ಬಾಯಿಗೆ ತುರುಕಿಸದಂತೇ
ನೋಡಿಕೋ, ಕಾಪಾಡಿಕೋ
ಒಂದೇ ದಿನ ಎರಡು ಮನೆಯಿಂದಾಮಂತ್ರಣ
ಊಟಕೆ ಬರದಂತೆ ಇದು ನಿಯಂತ್ರಣ
ಸಂಜೆ ಮಲಗಿದವ ಮರುದಿನ ಏಳದಂತೇ
ಒಯ್ದುಕೋ, ಹಾರಿದ ಶ್ವಾಸ ಯಾರೂ ಕೇಳದಂತೇ
ಜಗದೋದ್ಧಾರಕಾ ಜಾಣಾ
ಮುಂದೆಂದೂ ಕರುಣಿಸದಿರು ಪ್ರಾಣಾ.

(ಕೃಪೆ : ಪ್ರಜಾವಾಣಿ)

HAVYAKA NAGAR CO-OP. HOUSING SOCIETY
(PROPOSED)

As intimated earlier, the members have started collecting Rs.35,000/-which is payable to them. The balance amount of Rs.845/-, as decided, will be the donation of each member to Havyaka Welfare Trust. The names of the donors will be printed in the next issue of the Sandesha.

R. P. Hegde
Hon. Secretary

Vadhu Varanveshana Shibira (Marriage Mela)

HAVYAKA SANSKARA & SANSKRITI DAY OF 9TH FEBRUARY 2014

Venue : **Shri Vardhman Stanakvasi,** Jain Sangh, L.T. Road, Opp. Diamond Cinema, Borivili (W).

REGISTRATION & BREAK FAST : 9.30 a.m to 10.00 a.m.

HAVYAKA CHEF COMPETITION : 10.00 a.m. to 10.30 a.m.

Two Categories - 1) Sweet Dish 2) Non Sweet Dish.
Participants can participate in both the categories. The Main ingredients for both the dishes should be **Rice & Coconut.** The participants should display the menu of the dish. Selected recipies will be published in Havyaka Sandesha.

VADHU VARA ANVESHANA PROGRAMME : 10.30 a.m to 12.30 p.m.

To be inaugurated by Chief Guest : **Vidwan Shri Nagendra Bhat, Hitlalli**

Talk on Havyaka Sanskriti & Sanskara by Chief

Followed by Question & Answers

Open Forum for Interaction (Exchanging the datas)

Lunch Break : 12.30 p.m. to 2.00 p.m.

TRADITIONAL SONGS COMPETITION : 2.00 p.m to 3.00 p.m.

Songs should be those which are Sung During the Occasion of Marriage.
Time Given is Max -3 minutes

TRADITIONAL SONG JUGAL BANDI

One party - Groom. The other Party - Bridegroom

DANCE COMPETITION : 3.00 p.m to 5.00 p.m.

Categories

A Classical Dance Form

B Bollywood / Tolly wood / Sandal wood / Hollywood and any other form..

Age Group for both the categories

1) Up to 12 years 2) 12 to 18 years 3) 18 to 30 years 4) Above 30

C Nach -Baliye (Couple Dance)

Each Dance performance should not exceed 3 minutes

Participants should register their name. Those who are selected will get an opportunity to participate in grand finale.

For more details and registration Please Contact :-

Shashikala Hegde	-	9869015917
Tanuja Hegde	-	9869431749
Manjula Bhat	-	996732816
Shanta Bhat	-	7208171617
Tanuja Bhat	-	9820125830

Attend, Enjoy and return with Sweet Memories

*PAGE DONATED BY : **SMT. TRIVENI BHATSHIKAR & SHRI R. T. BHATSHIKAR,** GHATKOPAR IN THE MEMORY OF **LATE SHRI T. R. BHATSHIKAR** (DEC.-2014)*

ಅಭಿರುಚಿ

✍ ಎಂ.ವಿ. ಶರ್ಮಾ, ತದ್ದಲಸೆ

ಮನಸ್ಸು, ಮಾತು ಹಾಗೂ ದೇಹದ ವಿವಿಧ ಶಕ್ತಿಗಳನ್ನು ಅಭಿರುಚಿಗಾಗಿ ಪ್ರಯೋಗಿಸುವದು ಮಾನವ ಲಕ್ಷಣ. ಜೀವನವನ್ನು ಸುಂದರವಾಗಿ ನಿರ್ಮಿಸುವದು, ಕಾಪಾಡುವದು, ಖುಷಿಪಡಿಸುವದು, ಬೆಳೆಸುವದು ಇತ್ಯಾದಿ ಪ್ರವೃತ್ತಿಗಳನ್ನು ಕೂಡಾ ಅಭಿರುಚಿಯೆಂದು ಪರಿಗಣಿಸಬೇಕು. ಅನೇಕ ಪಶುಪಕ್ಷಿಗಳು ಆಕರ್ಷಕವಾಗಿ ಕಾಣಿಸುತ್ತವೆ. ಆದರೆ ಅವುಗಳು ಅದರ ಪ್ರಕೃತಿ ಅಭಿರುಚಿಗಾಗಿ ಅವು ತಿಳಿದು ತಿಳಿದೂ ಏನೂ ಪ್ರಯತ್ನಮಾಡುವದಿಲ್ಲ. ಜಿಂಕೆಯ ಕಣ್ಣು, ಮೊಲದ ಮೈ, ನವಿಲುಗರಿಯ ಬಣ್ಣ, ಆನೆಯ ದಂತ, ಹುಲಿಯ ಪಟ್ಟೆ, ಇವೆಲ್ಲ ಮೋಹಕವೇ... ಆದರೆ ಯಾರಿಗೆ? ನಮಗೆ. ಆ ಪ್ರಾಣಿಗಳ ದೃಷ್ಟಿಯಿಂದ ಕೇವಲ ಅಂಗಗಳು. ಅವುಗಳಿಗೆ ಅಡಗಿಕೊಳ್ಳುವ ತಾಣಮಾತ್ರ. ಹಸುರಿನ ಹಾಸಿಗೆ, ಹೂವಿನ ರಾಶಿ, ಕಾಮನಬಿಲ್ಲು, ಪ್ರಕೃತಿ ಸೌಂದರ್ಯ ಇವೆಲ್ಲವು ಮನುಷ್ಯನ ಭಾವನೆ ಭಾಷೆ. ಪಶು ಪಕ್ಷಿಗಳಿಗೆ ತಿಳಿಯದು.

ಕೋತಿ ಅಶೋಕ ವನವನ್ನೇ ಹಾಳು ಮಾಡಿತು. ಆನೆ ದೇವಾಲಯ ಕಂಬಗಳನ್ನೇ ಕೆಡವಿತು. ಕೋಳಿಗೆ ತಿಪ್ಪೆಗುಂಡಿಯಲ್ಲಿ ಒಂದು ಅಮೂಲ್ಯ ವಸ್ತು ಸಿಕ್ಕಿದರೂ ಒಂದು ಜೋಳದ ಕಾಳಿಗಿಂತಲೂ ಅದು ಕಡೆ. ಕೇವಲ ಶಾರೀರಿಕ ಪ್ರಯೋಜನ ನೋಡುವದು ಪಶು ಪ್ರವೃತ್ತಿ. ಅಭಿರುಚಿಯನ್ನು ಅನ್ವೇಷಿಸುವದು ಮಾನವ ಗುಣ.

ನಮ್ಮ ಅಜ್ಜಂದಿರು ಬೆಟ್ಟ ಗುಡ್ಡ ತೋಟಗಳಲ್ಲಿ ಹಲವಾರು ಬಗೆಯ ಹಣ್ಣು ಹಂಪಲ, ಗಿಡಗಳನ್ನು ಬೆಳೆಸುತ್ತಿದ್ದರು. 'ಅಜ್ಜಾ, ಈ ಗಿಡ ಮರಗಳಿಲ್ಲ ಬೆಳೆದು ನಿಲ್ಲಲು ಅದೆಷ್ಟೋ ವರ್ಷಬೇಕು' ಎಂದರೆ 'ಈ ಬೆಳೆದ ಗಿಡಮರಗಳಲ್ಲಿ' ಮುಂದೆ ಹಣ್ಣುಗಳಾಗುತ್ತವೆ. ಅವುಗಳನ್ನು ತಿಂದು ಆನಂದ ಪಡುತ್ತಾರೆ.' ಎನ್ನುತ್ತಾನೆ.

'ಆಗ ನೀವು ಇರವುದಿಲ್ಲವಲ್ಲ..' ಎಂದರೆ.

'ನಾನು ಇಲ್ಲದಿದ್ದರೇನಂತೆ' ಇಲ್ಲಿ ಇರುವವರಿಗೆಲ್ಲ ಆನಂದ ಸಿಗುತ್ತದಲ್ಲ.. ಅಭಿರುಚಿ ಹೆಚ್ಚುತ್ತದೆಯಲ್ಲ'-ಎಂದ.

ಅಭಿರುಚಿ ಒಂದು ಮಹಾಶಕ್ತಿ ಅದರಲ್ಲಿ ಆಸ್ತಾ ಇರುವಂತ ಪ್ರೇರಣೆಯೂ ಇದೆ. ನಿಜವಾದ ಅಭಿರುಚಿ ಬೇಸರ ತರಿಸುವದಿಲ್ಲ. ಅದರ ದಿವ್ಯತೆ ಧನ್ಯತೆ ನಿತ್ಯ ನೂತನ. ಕ್ಷಣ ಕ್ಷಣಕ್ಕೂ ಹೊಸತು. ಅಭಿರುಚಿಯೆಂದರೆ ಆತ್ಮ ಸಾಕ್ಷಾತ್ಕಾರ, ನಮ್ಮೊಳಗೆ ಸೂಕ್ಷ್ಮರೂಪದಲ್ಲಿ ಅಡಗಿರುವ ಸುಂದರ ಭಾವನೆಗಳು. ಉದಾತ್ತ ವಿಚಾರಗಳು, ಸುಂದರವಾದ ಹೂವು ಕಂಡಾಗ ಆಹಾ! ಎಂಥ ಅದ್ಭುತವಾಗಿದೆ ಎಂಬ ಉದ್ಗಾರ ಬರುವದು ಒಳಗಿನಿಂದಲೇ.

ಕನ್ನಡಿಯಲ್ಲಿ ತನ್ನ ಮುಖ ಚೆನ್ನಾಗಿ ಕಂಡಷ್ಟು ಇತರರ ಮುಖ ಕಾಣಿಸುವದಿಲ್ಲ. ತಾನು ಸುಂದರನೆಂದೇ ಕಾಣುವವನ ಅನಿಸಿಕೆ. ಹಾಗಾಗಿ ಹೇಗೆ ಇದ್ದರೂ ತಾನು ತನಗೆ ಸುಂದರನೇ.

ಏಕೆಂದರೆ ಪ್ರತಿ ರೂಪದ ಹಿಂದೆ ಆತ ಸ್ವತಃ ಇದ್ದಾನೆ. ಈ ಆತ್ಮ ದರ್ಶನವೇ ಅಭಿವ್ಯಕ್ತಿಯೇ ಅಭಿರುಚಿ.

ಅಭಿರುಚಿಯೆಂದರೆ ಹೊರಗಿನ ಬೆಡಗು ಬಿನ್ನಾಣವಲ್ಲ. ಗೌಜು ಗಲಾಟೆಗಳಲ್ಲ. ಚಿತ್ರ ವಿಚಿತ್ರ ವರ್ತನೆಯಲ್ಲ. ಸಂಜೀವ ಸಂಯಮ, ಸಾರಾಸಾರ ವಿವೇಕ, ಔಚಿತ್ಯ, ಸಹಜ ಸಮಸ್ತ ಗುಣಗಳ ಸಂಗಮ. ಆತ್ಮಕೇಂದ್ರಿತ ಅಹಂಕಾರಿಗಳು ತಮ್ಮದನ್ನು ಮಾತ್ರ ಅಭಿರುಚಿ ಇತರರದು ಕೊಳಕು ಎಂದು ತಿಳಿದುಕೊಡಿರುತ್ತಾರೆ. ಲೇಪನಗಳಿಂದ ಮುಖ ಅಲಂಕರಿಸಿಕೊಳ್ಳುವದು ಚಿತ್ರಗಳಿಂದ ಮನೆ ಅಲಂಕರಿಸುವುದು, ರೇಶಿಮೆ ಬಟ್ಟೆಯಿಂದ ಮೈ ತುಂಬಿಕೊಳ್ಳುವದು ಅಭಿರುಚಿಯಲ್ಲ. ನನ್ನ ಕೆಲಸ, ಮಾತು ಕೃತಿಯಿಂದ ಅಭಿರುಚಿ ಪೂರ್ಣವಾಗಿರಬೇಕು. ಒಳಹೊರ ಜೀವನ ನಿರ್ಮಲವಾಗಿರಬೇಕು... ಎಂದು ಮನುಷ್ಯನಿಗೆ ತಾನಾಗಿ ಅನ್ನಿಸುವಂತಾಗಬೇಕು.

ಅಭಿರುಚಿ ಅನುಭೂತಿ ಉಂಟಾಗುವದು ನಮ್ಮ ಪ್ರವೃತ್ತಿ ಶಕ್ತಿ, ಕೌಶಲ್ಯ ದೃಷ್ಟಿ ಹಾಗೂ ಜ್ಞಾನವನ್ನು ಅವಲಂಬಿಸಿದೆ.

ನೂತನ ಹವ್ಯಕ ಡಿರೆಕ್ಟರಿ

ನಮ್ಮ ಸಂಸ್ಥೆಯು ಸುವರ್ಣ ಮಹೋತ್ಸವದ ಸಮಾರೋಪ ಸಮಾರಂಭದಲ್ಲಿ ಸದಸ್ಯರ ಹೆಸರು, ವಿಳಾಸ, ದೂರವಾಣಿ ಸಂಖ್ಯೆ ಹಾಗೂ ಇ-ಮೇಲ್‌ಗಳ ವಿವರಗಳುಳ್ಳ ನೂತನ ಡಿರೆಕ್ಟರಿಯನ್ನು ಹೊರತರಲಿದೆ. ಈ ವರೆಗೆ ಸದಸ್ಯರಾಗದೇ ಉಳಿದವರಿಗೆ ಸಂಸ್ಥೆಯ ಆಜೀವ ಸದಸ್ಯ ಅಥವಾ ಪೋಷಕ ಸದಸ್ಯರಾಗಿ ಹೆಸರನ್ನು ನೋಂದಾಯಿಸುವ ಹಾಗೂ ಈಗಾಗಲೇ ಆಜೀವ ಸದಸ್ಯರಾದವರಿಗೆ ಪೋಷಕ ಸದಸ್ಯರಾಗಿ ಹೆಸರನ್ನು ನೋಂದಾಯಿಸುವ ಅವಕಾಶವಿದೆ.

ಈ ಸದವಕಾಶವನ್ನು ಉಪಯೋಗಿಸಿಕೊಂಡು ಎಲ್ಲರೂ ಸಹಕರಿಸಬೇಕಾಗಿ ವಿನಂತಿ. ಮಾಹಿತಿಯು ಎಪ್ರಿಲ್ 30ರ ಒಳಗೆ ಕಲಿನಾ ಆಫೀಸಿಗೆ ತಲುಪಬೇಕು.

ಸುಮ್ನೆ ತಮಾಷೆಗೆ

- ಸರಕಾರದಿಂದ ಹೊಟೇಲಿಗೆ ಆದೇಶ-ಒನಿಯನ್ ಉತ್ತಪ್ಪಾ ತಿನ್ನುವವರಿಗೆ ಪಾನ್‌ಕಾರ್ಡ್ ಅನಿವಾರ್ಯ.
- ಸರದಾರ್ಜಿ ತಲೆಯ ಜೊತೆಗೆ ಶೋಲ್ಡರಿಗೂ ಶಾಂಪು ಹಚ್ಚುತ್ತಿದ್ದ. ಹೆಂಡತಿ : ನೀವು ಶೋಲ್ಡರಿಗೂ ಯಾಕೆ ಶಾಂಪು ಹಚ್ಚುತ್ತೀರಿ? ಸರ್ದಾರ್ಜಿ : ಮಳ್ಳಿ ಇದು ಸಾಧಾರಣ ಶಾಂಪು ಅಲ್ಲ ಇದು "Head & Shoulder"
- ಹೆಂಡತಿ : ನಿಮಗೆ ಗೊತ್ತೇನ್ರಿ? ಸ್ವರ್ಗದಲ್ಲಿ ಗಂಡನನ್ನೂ, ಹೆಂಡತಿಯನ್ನೂ ಜೊತೆಗಿರಲು ಬಿಡುವುದಿಲ್ಲವಂತೆ. ಗಂಡ : ಅದಕ್ಕೇ ಅದನ್ನು ಸ್ವರ್ಗ ಅಂತ ಕರೆಯುವದು.
- ಎಲ್ಲ ಪುರುಷರು ಮದುವೆಯಾಗುವ ಮುನ್ನ ನರೇಂದ್ರ ಮೋದಿಯಂತೆ ಉತ್ಸಾಹದಲ್ಲಿ ಮಾತನಾಡುತ್ತಾರೆ. ಮದುವೆ ಆದ ಮೇಲೆ ಮನಮೋಹನ ಸಿಂಗರಂತೆ ಅಂತರ್ಮುಖಿಗಳಾಗುತ್ತಾರೆ.

ಸಂಗ್ರಹ : ಜಯಾ ಎಮ್. ಭಟ್, ಡೊಂಬಿವಲಿ

2014ರ ಸಾಲಿನ ಕರ್ಕಿ ವೆಂಕಟರಮಣ ಶಾಸ್ತ್ರಿ ಸೂರಿ ಪ್ರಶಸ್ತಿಗೆ ಪಾತ್ರರಾದ ಶ್ರೀ ಮನೋಹರ ಪ್ರಸಾದ್

ಶ್ರೀ ಮನೋಹರ ಪ್ರಸಾದ್
ಸುದ್ದಿ ವಿಭಾಗದ ಮುಖ್ಯಸ್ಥರು
ಉದಯವಾಣಿ ರಾಷ್ಟ್ರೀಯ ದೈನಿಕ,
ಮಂಗಳೂರು

ಶ್ರೀ ಮನೋಹರ ಪ್ರಸಾದ್ ಕನ್ನಡ ಪತ್ರಿಕೋದ್ಯಮ ಕ್ಷೇತ್ರದಲ್ಲಿ ಪ್ರಮುಖವಾದ ಹೆಸರು. ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸುಮಾರು ೪ ದಶಕಗಳ ಕಾಲ ಪತ್ರಿಕೋದ್ಯಮ ಕ್ಷೇತ್ರದಲ್ಲಿ ಅನುಭವವಿರುವ ರಾಜ್ಯಮಟ್ಟದ ವರದಿಗಾರ. ಜೀವನದುದ್ದಕ್ಕೂ ಪತ್ರಿಕೋದ್ಯಮವನ್ನು ಹಾಸಿಕೊಂಡು, ಅದನ್ನೇ ಹೊದ್ದುಕೊಂಡು, ವಿಶೇಷ ಸಾಧನೆಗೈದು, ಪತ್ರಿಕಾ ವರದಿಗಾರನಾಗಿ ತನ್ನದೇ ಆದ ಛಾಪು ಮೂಡಿಸಿದ ಅಪರೂಪದ ಪತ್ರಕರ್ತ.

ಒಂದೆರಡು ಪತ್ರಿಕೆಗಳಿದ್ದ ನವಭಾರತದ ಕಾಲದಿಂದ ಈಗ ನೂರಾರು ಪತ್ರಿಕೆಗಳಿರುವ ಹೊಸ ಭಾರತದ ಕಾಲದಲ್ಲಿಯೂ ತನ್ನ ಶ್ರೇಷ್ಠತೆ ಉಳಿಸಿಕೊಂಡ ಸುದ್ದಿಗಾರ. 2005ರ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಪತ್ರಕರ್ತ, ಪತ್ರಿಕೋದ್ಯಮಕ್ಕೆ ಸಲ್ಲಿಸಿದ ಸೇವೆಗಾಗಿ, ಪತ್ರಿಕೋದ್ಯಮದ ಮೂಲಕ ಸಾಮಾಜಿಕ ಸಾಮರಸ್ಯಕ್ಕೆ ನೀಡಿದ ಕಾಣಿಕೆಗಾಗಿ ದಕ್ಷಿಣ ಕನ್ನಡ, ಉಡುಪಿ ಮತ್ತು ಕಾಸರಗೋಡು ಜಿಲ್ಲೆಗಳ 500ಕ್ಕೂ ಮಿಕ್ಕಿದ ಸಂಘ-ಸಂಸ್ಥೆಗಳಿಂದ ಪ್ರಶಸ್ತಿ ಪುರಸ್ಕಾರ ಮತ್ತು ಸಮ್ಮಾನ.

ಬಹಳಷ್ಟು ಸುದೀರ್ಘವಾದ ಸಾಧನೆಯ ವ್ಯಕ್ತಿತ್ವ ಹೊಂದಿರುವ ಶ್ರೀ ಮನೋಹರ ಪ್ರಸಾದ್‌ರವರ ಪರಿಚಯ.

- ಉದಯವಾಣಿ ರಾಷ್ಟ್ರೀಯ ದಿನಪತ್ರಿಕೆಯಲ್ಲಿ 1984ರಿಂದ ವರದಿಗಾರ, ಮುಖ್ಯ ವರದಿಗಾರ, ಸುದ್ದಿ ವಿಭಾಗದ ಮುಖ್ಯಸ್ಥರಾಗಿ ಸೇವೆ
- ಪತ್ರಿಕಾರಂಗದ ಸಾಧನೆಗಾಗಿ ದಕ್ಷಿಣ ಕನ್ನಡ ಜಿಲ್ಲಾ ಮಟ್ಟದ ರಾಜ್ಯೋತ್ಸವ ಪ್ರಶಸ್ತಿ, ಕೆನರಾ ಬ್ಯಾಂಕಿನಿಂದ ಸಾಧನಾಶೀಲತೆ, ಪಾಲ್ಸ್ ಪತ್ರಿಕೋದ್ಯಮ ಪ್ರಶಸ್ತಿ, ಕರ್ನಾಟಕ ರಾಜ್ಯ ಜೇಸೀಸ್‌ನಿಂದ ರಾಜ್ಯ ಯುವ ಸಾಧಕ, ಸಂದೇಶ ಪ್ರತಿಷ್ಠಾನದಿಂದ ವಿಶೇಷ ಸಾಧನಾ, ಜೈಂಟ್ಸ್ ಇಂಟರ ನ್ಯಾಶನಲ್ ಸಾಧನಾಶೀಲ ಮುಂತಾದ ಪ್ರಶಸ್ತಿಗಳು.
- ಭಾರತದ ಸಾರ್ವಜನಿಕ ಸಂಪರ್ಕ ಸೊಸೈಟಿಯ ಮಂಗಳೂರು - ಮಣಿಪಾಲ ಘಟಕದಿಂದ 1998ರ ಸರ್ವಶ್ರೇಷ್ಠ ಸಾರ್ವಜನಿಕ ಸಂಪರ್ಕ ವ್ಯಕ್ತಿ ಪ್ರಶಸ್ತಿ.
- ರೋಟರಿ ಅಂತಾರಾಷ್ಟ್ರೀಯ ಸಮೂಹ ಅಧ್ಯಯನ ವಿನಿಮಯ ತಂಡಕ್ಕೆ ಆಯ್ಕೆಯಾಗಿ1991ರಲ್ಲಿ ಆರು ವಾರ ಆಸ್ಟ್ರೇಲಿಯಾದಲ್ಲಿ ಅಧ್ಯಯನ ಪ್ರವಾಸ
- 25 ಸಣ್ಣ ಕತೆಗಳು, ಒಂದು ತುಳು ಕಥಾಸಂಕಲನ, 20 ಕವನಗಳು ಪ್ರಕಟ. ತುಳು ಕಾದಂಬರಿಗೆ ಉಡುಪಿ ತುಳುಕೂಟದ ಪ್ರಶಸ್ತಿ.
- ಮಂಗಳೂರು ಆಕಾಶವಾಣಿಯಲ್ಲಿ 65ಕ್ಕೂ ಹೆಚ್ಚಿನ ಕಾರ್ಯಕ್ರಮಗಳ ಪ್ರಸಾರ
- ಸುಮಾರು 2000ದಷ್ಟು ಕಾರ್ಯಕ್ರಮಗಳಲ್ಲಿ ಭಾಷಣ, ಉಪನ್ಯಾಸ, ಪ್ರಬಂಧ ಮಂಡನೆ ನಿರ್ವಹಣೆ.

ಹವ್ಯಕ Theme Song

ಹವ್ಯಕರು ನಾವೆಲ್ಲಾ ಒಂದಾಗಿ ಇಂದೆ
ಒಮ್ಮತದಿ ಸಮ್ಮತದಿ ಸಾಗೋಣ ಮುಂದೆ

ದೇಶ ಪರದೇಶದಲಿ ನೆಲೆಸಿದರು ನಾವು
ಹವಿಗನ್ನಡದ ಕಂಪ ಹರಡೋಣ
ಸಂಸ್ಕಾರ ಸಂಸ್ಕೃತಿಯ ಜ್ಯೋತಿ ಬೆಳಗಿಸಿ ನಾವು
ಸಹಕಾರ ಮಂತ್ರವನು ನಮದಾಗಿಸೋಣ

ಯಶ, ಕೀರ್ತಿ, ವಿಜಯಗಳು ನಮದಾಗಲೆಂದು
ಗಾಯತ್ರಿ ದೇವಿಯ ಸ್ಮರಿಸಿ ಕೈಮುಗಿದು
ಹವ್ಯಕದ ತೇರಿನಾ ವಿಜಯದ ಪತಾಕೆ
ಹಾರಿಸುವ ನಾವು ನಭದೆತ್ತರಕ್ಕೆ.

Havyaka Theme Song

Havyakaru Naavella ondagi inde
Ommathadi sammathadi sagona munde

Desha Paradeshadali nelesidaru navu
Havigannadada kampa haradona
Sanskara, Sanskrutiya jyoti belagisi navu
Sahakara mantravanu namadagisona

Yasha, keerti, vijayagalu namadagalendu
Gayatri Deviya smarisi kai mugidu
Havyakada Terinaa Vijayada pathake
Harisuva naavu nabhadettarakke.

[Theme song written in english aphhabets for the benifit of those who can not read Kannada]

- Shashikala Hegde

*PAGE DONATED BY : **SHRI N. R. HEGDE, DOMBIVLI** (DEC.-2013)*

ಸಂಭ್ರಮದ ಹವ್ಯಕರ ಪಿಕ್ ನಿಕ್

✍ ವರದಿ : ಶಶಿಕಲಾ ಹೆಗಡೆ

19 ಜನವರಿ 2014ರಂದು ಮುಂಬಯಿ ಅಹಮದಾಬಾದ್ ಹೆದ್ದಾರಿಯಲ್ಲಿರುವ (ವಿರಾರ) ನಂದನವನ ರಿಸೋರ್ಟ್‌ನಲ್ಲಿ ಹವ್ಯಕ ಪಿಕ್‌ನಿಕ್‌ನ್ನು ಆಯೋಜಿಸಲಾಗಿತ್ತು. ಕಾಂಕ್ರಿಟ್ ನಗರ ಮುಂಬಯಿಯಿಂದ ತುಸು ದೂರ, ಗಿಡಮರಗಳಿಂದ ತುಂಬಿದ ಹಸಿರಿನ ನೋಟ, ಹಿತವಾದ ಮುಂಜಾನೆಯ ಚಳಿಯ ವಾತಾವರಣ, ಬೋರಿವಲಿ, ದಾದರ್, ಪನ್‌ವೇಲ್ ಹಾಗೂ ಡೊಂಬಿವಿಲಿಯಿಂದ ಬಂದ ಹವ್ಯಕ ಬಾಂಧವರನ್ನು ಸ್ವಾಗತಿಸಿತ್ತು. ಬಿಸಿ ಬಿಸಿಯಾದ ಬೆಳಗಿನ ತಿಂಡಿ, ಟೀ, ಕಾಫಿ ಜೊತೆ ನೀಡಿತ್ತು.

ಸಂಕಷ್ಟಹರ ಚತುರ್ಥಿಯ ಶುಭ ದಿನದಂದು 'ಗಣಪತಿ ಬಪ್ಪಾ ಮೋರೆಯಾ' ಎನ್ನುವ ಜಯಕಾರದೊಂದಿಗೆ ಗಣಪತಿ ಸ್ತುತಿಯನ್ನು ತನುಜಾ ಭಟ್, ಪುಷ್ಪಾ ಭಟ್ ಹಾಗೂ ವನಿತಾ ಭಟ್ ಹಾಡಿದರು. ಸಂಸ್ಥೆಯ ಅಧ್ಯಕ್ಷರಾದ ಶ್ರೀ ಎನ್. ಆರ್. ಹೆಗಡೆಯವರು ಎಲ್ಲರನ್ನು ಸ್ವಾಗತಿಸಿದರು. 'ಹವ್ಯಕರು ನಾವು' ಎನ್ನುವ theme songನ್ನು ಹಾಡಲಾಯಿತು.

ನಂತರ ಸಂಜಯ ಭಟ್‌ರ ನೇತೃತ್ವದಲ್ಲಿ ಆಟೋಟಗಳ ಸ್ಪರ್ಧೆ ಆರಂಭವಾಯಿತು. ಚಿಕ್ಕ ಚಿಕ್ಕ ಮಕ್ಕಳು ಬೇರೆ ಬೇರೆ ಗ್ರಹಗಳಿಂದ ಬಂದ ಏಲಿಯನ್‌ಗಳ ಹೆಸರಿನಿಂದ ತಮ್ಮ ತಮ್ಮ teamನ್ನು ರಚಿಸಿಕೊಂಡರು. ನಂತರ ಪ್ರಾರಂಭವಾದ carry on water ಸ್ಪರ್ಧೆಯಲ್ಲಿ ಸ್ಪಂಜಿನಿಂದ ನೀರನ್ನು ಸಾಗಿಸುವ ಆಟ ಎಲ್ಲರ ಗಮನ ಸೆಳೆಯಿತು. ಕಣ್ಣನ್ನು ಕಟ್ಟಿಕೊಂಡು ಚೆಂಡು ಹುಡುಕುವ ಆಟದಲ್ಲಿ ಆಡುವವರು ಶ್ರಮ ಪಟ್ಟರೆ, ಪ್ರೇಕ್ಷಕರು ಅವರ ಹಾವಭಾವ, ಹುಡುಕಾಟ ನೋಡಿ ನಕ್ಕು, ನಕ್ಕು ಸುಸ್ತಾದರು. Pebble ಮಾಲಾ ಸ್ಪರ್ಧೆಯಲ್ಲಿ ಎಲ್ಲರೂ ತಾವೇ ಮೊದಲು ಮಾಲೆಯನ್ನು ಮಾಡಬೇಕೆನ್ನುವ ಅವಸರದಲ್ಲಿ ಸೂಜಿಯಿಂದ ಕೈಚುಚ್ಚಿಕೊಂಡರೂ ನಗುತ್ತಾ Photoಗೆ Pose ಕೊಟ್ಟರು. Opening the knot ಆಟದಲ್ಲಿ ದಾರದ ಗಂಟನ್ನು ಬಿಚ್ಚುವ ಗಡಿಬಿಡಿ ಸ್ಪರ್ಧೆಗಳಲ್ಲಿ ಕಾಣುತ್ತಿತ್ತು. ಅಂದಿನ ಮುಖ್ಯ ಆಕರ್ಷಣೆಯ ಆಟ Blowing the Cup with Ballons ಮೇಜಿನ ಮೇಲಿಟ್ಟಿದ್ದ Cupಗಳನ್ನು ಕಡಿಮೆ ಅವಧಿಯಲ್ಲಿ ಬೀಳಿಸಿ, ಆಟವನ್ನು ಗೆಲ್ಲುವ ಉತ್ಸಾಹ ಸ್ಪರ್ಧಾಳುಗಳ ಮುಖದಲ್ಲಿ ಕಾಣುತ್ತಿತ್ತು. Catching the balls with cups ಆಟದಲ್ಲಿ ಜನರ ಉತ್ಸಾಹ, ಈ ಚಪ್ಪಾಳೆಯ ಸದ್ದು T-20 world cup ಗಿಂತ ಹೆಚ್ಚಾಗಿತ್ತು. ಯಾರೇ ಗೆದ್ದರೂ ಜೋರಾದ ಚಪ್ಪಾಳೆ, ನಗು. ಆಟವಾಡುವವರಿಗೆ ಪ್ರೋತ್ಸಾಹ ನೀಡುತ್ತಿತ್ತು.

ಆ ಹೊತ್ತಿಗಾಗಲೇ ಮಧ್ಯಾಹ್ನ ಊಟದ ವೇಳೆ. ಕೆಲವರು ಸ್ವಲ್ಪ ಸಮಯವಾದರೂ ಈಜುಕೊಳದಲ್ಲಿ ಕಳೆಯುವ ಆಸೆಯಿಂದ ಅತ್ತ ಧಾವಿಸಿದರೆ, ಇನ್ನುಳಿದವರು ಊಟದ ಮನೆಯ ಕಡೆ ನಡೆದರು. ಊಟದ ಸಾಲಿನಲ್ಲಿ ನಿಂತ ಹೆಂಗಳೆಯರಿಗೆ ಸಂಕ್ರಾಂತಿಯ ನಿಮಿತ್ತ ಅರಿಶಿನ ಕುಂಕುಮ ನೀಡಲಾಯಿತು. ಗಂಡಸರು ಎಳ್ಳುಂಡೆಯನ್ನು ನಗುನಗುತ್ತಾ ಸ್ವೀಕರಿಸಿದರು. ಬಿಸಿ ಬಿಸಿ ಊಟದ ಜೊತೆಗೆ ಎಲ್ಲರೂ ಪರಿಚಿತರೊಂದಿಗೆ ಮಾತನಾಡುತ್ತಿದ್ದ ದೃಶ್ಯ ಸಾಮಾನ್ಯವಾಗಿತ್ತು. ಹಿತವಾದ ಕುಡಿಯುವ ಮಜ್ಜಿಗೆ ಎಲ್ಲರಿಗೂ ಖುಷಿ ನೀಡಿತ್ತು.

ಊಟದ ನಂತರ ವಿರಾಮವಿಲ್ಲವಾದರೂ ಕುಳಿತಲ್ಲೇ ಆಡುವಂತೆ ಅಂತಾಕ್ಷರಿಯನ್ನು ಆಯೋಜಿಸಲಾಗಿತ್ತು. ರಾಗಬದ್ಧವಾಗಿ ಹಾಡಲು ಬರದಿದ್ದರೂ ತಮಗೆ ಬಂದಂತೆ ಹಾಡಿ ಎಲ್ಲರೂ ಸಂತಸ ಪಟ್ಟರು. ಪ್ರತಿಯೊಂದು ಹಾಡಿಗೂ ಜನರ ಚಪ್ಪಾಳೆಯ ಸದ್ದು ತಾಳದಂತೆ ಜೊತೆ ನೀಡಿತ್ತು. ನಂತರದ ಸರದಿ 'Dance Floor' ವಯಸ್ಸಿನ ಬೇಧವಿಲ್ಲದೆ ಹಿರಿಯರೂ ಎಳೆಯರಾಗಿ, ತಮ್ಮದೇ ಹಾವ ಭಾವದೊಂದಿಗೆ ಹೊಸಹಾಡಿಗೂ ಹೆಜ್ಜೆ ಹಾಕಿ ಕುಣಿದರು. ಬಿಸಿ ಬಿಸಿ ಚಹದೊಂದಿಗೆ ಗರಂ ಗರಂ ಹೌಸಿ ಆಟ.

ಕೊನೆಯಲ್ಲಿ ಬಹುಮಾನ ವಿತರಣೆ. ಅಂದು ಪಿಕ್‌ನಿಕ್‌ಗೆ ಬಂದ ಎಲ್ಲರಿಗೂ ಬಹುಮಾನ. ಚಿಕ್ಕ ಮಕ್ಕಳಿಗೆ ವಿಶೇಷ ನೆನಪಿನ ಕಾಣಿಕೆಯನ್ನೂ ನೀಡಲಾಯಿತು.

ಅಂದಿನ ದಿನ ಕೆಲವೇ ಕ್ಷಣಗಳಲ್ಲಿ ಕಳೆದಂತೆ ಅನಿಸಿತು. ವರ್ಷದಲ್ಲಿ ಒಂದು ದಿನವಾದರೂ ದೈನಂದಿನ ಯಾಂತ್ರಿಕತೆಯಿಂದ ದೂರವಾಗಿ, ಹವ್ಯಕ ಬಾಂಧವರೊಂದಿಗೆ ನಕ್ಕು, ನಲಿದು ಕಳೆದ ತೃಪ್ತಿ ಎಲ್ಲರ ಮುಖದಲ್ಲಿ ಕಾಣುತ್ತಿತ್ತು. ಮರಳಿ ಗೂಡಿಗೆ ತೆರಳುವ ಆತುರ ಕಾತುರ ಎಲ್ಲರಿಗೂ ಆದರೂ ಮತ್ತೊಮ್ಮೆ ಭೇಟಿಯಾಗುವ ಭರವಸೆಯೊಂದಿಗೆ ಪರಸ್ಪರ ವಿದಾಯ ಹೇಳಲಾಯಿತು.

DUE DROPS

Without my permission
You change your colours
Pink, red. blue, black
But no complaints
You cheer me up
With sunshine
Scattering moonlight
Wearing the robe of
Innumerable stars...
You are my sky
Infinite and bright

At the blissful dawn
My gratitude sees
No boundaries
I jump very high
To touch your feet
But can reach you
Only in my dreams

You bend as if to kiss
And comfort me
Not enough
I smoulder here
Even at your tender gaze
You are melting there
And befall on me
Softly and gently
Oh! Due Drops
Deep into my heart

Soon I smell the
Fragrance of countless flowers
That blossom within me

- Amita S. Bhagwat

ಬೆಳದಿಂಗಳಾ ತಾರೆ

ಬೆಳ್ಮುಗಿಲ ಬಳ್ಳಿಯಲಿ ಅರಳಿದ ಓ ಬೆಳಕೆ
ಇಳಿದು ಬಂದೆಯಾ ಭುವಿಗೆ ಹಚ್ಚಲು ಸಾಲು ಹಣತೆ
ನೀಲಿ ನೀರಿನ ಧಾರೆ ಹಸಿರು ಹರವಿನ ಸೀರೆ
ನಸುನಗುವ ನೆಲ ತುಂಬ ಕನವರಿಸಿದೆ ಕವಿತೆ.

ಕೈ ಬೀಸಿ ಕರೆಯುತಿದೆ ನಿನ್ನ ಒಡಲನು ಮುತ್ತಿಡಲು
ಘಮ ಘಮಿಸಿ ಸಂಭ್ರಮಿಸುವ ನಗೆ ಮಲ್ಲಿಗೆ...
ಕವಿದ ಕತ್ತಲೆಯ ಹಿಂದಿಕ್ಕಿ ಬೆಳದಿಂಗಳಾ ತಾರೆ
ಚಂದ್ರಮನ ಅಡಗಿಸಿದ ಮೊರೆವ ಮುಗಿಲ ಗೀತೆ.

ಮುಂಜಾನೆ ಇಬ್ಬನಿಯು ರಂಗೋಲಿ ಬಿಡಿಸುತಿದೆ
ಬೆಳ್ಳಕ್ಕಿ ಸಾಲುಗಳ ಚಿತ್ತಾರದೊಲುಮೆ
ನಿನ್ನ ನಗುವಲಿ ಬಿರಿದ ಮುತ್ತಿನಾ ಮಳೆ
ಹನಿಯಾಗಿ ಸುರಿಯುತಿದೆ ಕೆಂಪು ಹವಳದ ಒಳಗೆ

ಹೇಗೆ ಕವನಿಸಲಿ ಭಾಷ್ಯೆ ಮೀರಿದ ಆಸೆ
ಪರಿಭಾಷೆಯೊಳಗೆ ನಿಲುಕದಾ ಸತ್ಯನಿಷ್ಠೆ
ನೆಲದ ನೆರಳಲಿ ನಿಂತು ನೀಲಿ ಗಗನದಿ ಪ್ರಶ್ನೆ
ಕಾವ್ಯವಾದಳೆ ಕವಿತಾ ಎರಡಕ್ಷರದೊಳಗೆ
ಪ್ರತಿಮೆಯಾದಳೆ ಮನದ ಮಾಯೆಯೊಳಗೆ.

– ಗಂಗಾಧರ ಪಣಿಯೂರು

UIL

UGRU INDUSTRIES

With Best Compliments from

UGRU INDUSTRIES

Manufacturers of Speciality food products

Industrial Estate, Kumta,
North Kanara District, Karnataka

Plot Q1 & 2, Industrial Estate,
Hegde Road, Kumta, North Kanara District,
Karnataka - 581343, India.
Tel. & Fax : 08386-223-832
E-mail: ugruind@yahoo.co.in

ADVT.

ಮಯೂರ ವರ್ಮ ಸಾಂಸ್ಕೃತಿಕ ಪ್ರತಿಷ್ಠಾನ, ಮುಂಬಯಿ, ಕನ್ನಡ ಕಲಾಕೇಂದ್ರ, ಸಯನ್ (ಪೂ), ಮುಂಬಯಿ ಹಾಗೂ ನಾರಾಯಣಾಮೃತ ಫೌಂಡೇಶನ್ ಬೊರಿವಲಿ (ಪ) ಇವರ ಸಂಯುಕ್ತ ಆಶ್ರಯದಲ್ಲಿ

ವಾರ್ಷಿಕ ಸಮಾವೇಶ 'ಚಕ್ರಧಾರಿ' ಪ್ರಶಸ್ತಿ ಪ್ರದಾನ ಹಾಗೂ 'ಮುಂಬಯಿ ಕನ್ನಡಿಗರ ದೇವಾಲಯಗಳ ಮಾಹಿತಿ ಕೈಪಿಡಿ' ಲೋಕಾರ್ಪಣೆ

ಸ್ಥಳ : ರವಿವಾರ ತಾ. 23 ಫೆಬ್ರವರಿ 2014, ಸಂಜೆ ಗಂಟೆ 3.30ರಿಂದ ಕರ್ನಾಟಕ ಸಂಘ, ವಿಶ್ವೇಶ್ವರಯ್ಯ ಸಭಾಗೃಹ,
ಮಾಟುಂಗ (ಪ.), ಮುಂಬಯಿ - 400 016.

ಶ್ರೀ **ಪವಿತ್ರ ಭಟ್** ಸಂಗಡಿಗರಿಂದ ಭರತನಾಟ್ಯ (ನೃತ್ಯರೂಪಕ), ನಾದ ಕಲಾ ಕೇಂದ್ರ ಸಿಸಿ ಇವರಿಂದ 'ಸಂಗೀತ ಸುಧೇ'

ಪ್ರಶಸ್ತಿ ಪುರಸ್ಕೃತರು : ಶ್ರೀ **ಮದ್ಭಾರತ ಮಂಡಳಿ-ಅಂಧೇರಿ, ಮುಂಬಯಿ**

ಮುಖ್ಯ ಅತಿಥಿ : **ಡಾ. ತಾಳ್ತಜೆ ವಸಂತ ಕುಮಾರ,** ವಿಶ್ರಾಂತ ಮುಖ್ಯಸ್ಥರು, ಕನ್ನಡ ವಿಭಾಗ, ಮುಂಬಯಿ ವಿ.ವಿ.

ಗೌರವ ಅತಿಥಿಗಳು : **ವಿದ್ವಾನ್ ವಿಶ್ವನಾಥ ಭಟ್,** ಕೈರಬೆಟ್ಟು,

ಸಭಾಧ್ಯಕ್ಷತೆ : ಶ್ರೀ **ಎನ್. ಆರ್. ಅಕದಾಸ,** ಸಿರಸಿ ಅಧ್ಯಕ್ಷರು, ಮಯೂರ ವರ್ಮ ಸಾಂಸ್ಕೃತಿಕ ಪ್ರತಿಷ್ಠಾನ,
ಶ್ರೀ **ಶಿಮುಂಜೆ ಪರಾರಿ,** ಉಪಾಧ್ಯಕ್ಷರು ಮ. ಸಾಂ. ಪ್ರತಿಷ್ಠಾನ

ಸಂಚಾಲಕ ಗೌರವಾಧ್ಯಕ್ಷರು :
ಶ್ರೀ **ಬಿ. ಬಾಲಚಂದ್ರ ರಾವ್**

ಸಂಚಾಲಕ ಗೌ. ಉಪಾಧ್ಯಕ್ಷರು :
ಶ್ರೀ **ಎನ್. ಆರ್. ರಾವ್**
ಶ್ರೀ **ವಿ. ಕೆ. ಸುವರ್ಣ**

ಗೌ. ಪ್ರ. ಕಾರ್ಯದರ್ಶಿ :
ವಿಶ್ವನಾಥ ದೊಡ್ಮನೆ
ಮ. ಸಾಂ. ಪ್ರತಿಷ್ಠಾನ

ಸರ್ವರಿಗೂ ಆದರದ ಸ್ವಾಗತ

Advt.

PAGE DONATED BY : ***SMT. GANGA P. BHAGWAT PRABHADEVI IN MEMORY OF LATE SHRI P. R. BHAGWAT (DEC. 2013)***

Pen-name

✍ **L.V. Shastri, Bangalore**

Pen-name, as the name suggests, has everything to do with pen- ah! Only pen. It is something that is a matter of as much intrigue as admiration-mild to vociferous. Pen-name is a member in the family of 'pseudonym'. This being the case, the range of possibilities it can exercise can be wide- from amorous to venomous although it is normally not considered so. However, the main purpose for which it is evoked is to hide the identity of the person who is making it a tool - just as in the case of 'pseudonym'. Pen-name takes up just one topic, just writing, while the latter's range of application is wide and in fact unlimited- from things like springing a pleasant surprise on the loved ones, taking up productive cheating of someone or some establishment to terrorism of the deadliest variety and so on.

Wait! , should writing include modern variety, that is SMS, e-mail, twitter ------then it would encompass all possibilities of 'pseudonym' described above. But it need not include, since our 'pen-name', at least as conceived here, has to come out from the 'mightier than sword' - shall we also say 'going out of fashion'- pen, compulsorily.

Sticking to pen-name with the, by now, accepted meaning, it has been a sort of intrigue for me as to why the writer uses pen-name. I start imagining possible reasons. They can be quite a few, depending upon what can be imagined!

The person is a novice in the field of writing- unsure whether what he/she writes can be appreciated by the people around or acceptable for publication in even a moderately popular print medium. He/she does not want to take chances and wants to hide his/her identity.

Second, the person writes with a pointed objective of raising a heated debate in the public's mind, which can invite trouble for him/her with even dire consequences. He/she may like to play a part in renaissance (may be of his/her choice or even wishful thinking!), or, coming to ground realities, may like to get political reward for oneself or the party that he/she belongs.

Third, the writer has self-belief. He/she is reasonably confidant that his/her writings will be appreciated and lauded by the public and also the critics. He/she believes that his/her pen will someday make him/her famous-if not rich. So he/she does not hesitate to use a pen-name where he/she brings in the name of some dear or respected one like mother or father, the place of his birth etc.

Fourth----fifth---- well, your guess is as good as mine.

Incidentally, there is a very interesting type of writing-the 'ghost-writing'. Here, one writes and sacrifices his identity altogether- no real name or pen-name for the authorship! The authorship is transferred to some 'noble' soul-generally a minister or head of state or-now you please guess. And no one, except the person who has written, comes to know of it. Fair enough, the writing might carry a price, a reward, may be a means of livelihood for the person who writes-on a transferable basis. Well, ways of the world are many splendoured. Are not they?

APPEAL

Keravaashe Subrahmanya Bhat is suffering from Blood Cancer. He is undergoing treatment for limphoma-NHL in oncology department, KMC Attavar. He is unable to bear the huge expense of treatment. He is the head of th family consisting of wife, 2 children and mother. If anyone is willing to render help, they can credit amount to the following account..

Karnataka Bank, P.O. Hadiangady
Shirlal-574101 Udupi Dist
Account No. : 7232500100143101
Ifsc code : KARB0000723
Account holders name : Subrahmanya N.K.
Mobile :+91 9449895772

PAGE DONATED BY : **SHRI VIVEK BHAGWAT (2013)**

ಸಂಕ್ಷಿಪ್ತ ಸುದ್ದಿಗಳು

ಮುಂಬಯಿ ಕನ್ನಡ ಸಂಘದಲ್ಲಿ ದತ್ತಿ ಉಪನ್ಯಾಸಗಳು

ಮುಂಬಯಿ ಮಾಟುಂಗಾ ಪೂರ್ವದ ಮುಂಬೈ ಕನ್ನಡ ಸಂಘದ ಆಶ್ರಯದಲ್ಲಿ ಎರಡು ದತ್ತಿ ಉಪನ್ಯಾಸಗಳು ಸಂಘದ ವಾಚನಾಲಯದಲ್ಲಿ ತಾರೀಕು 21.12.2013ನೇ ಶನಿವಾರ ಸಂಜೆ ಗಂಟೆ 5.30ಕ್ಕೆ ನಡೆಯಿತು.

ಸಮಾರಂಭದ ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷರಾದ ಜಿ. ಎಸ್. ನಾಯಕರು ವಹಿಸಿದ್ದರು. ಆರಂಭದಲ್ಲಿ ಶ್ರೀ ಎಸ್. ಕೆ. ಪದ್ಮನಾಭರಿಂದ ಪ್ರಾರ್ಥನೆ ನಡೆಯಿತು. ಸಂಘದ ಅಧ್ಯಕ್ಷರಾದ ಜಿ. ಎಸ್. ನಾಯಕರು ಎಲ್ಲರನ್ನೂ ಸ್ವಾಗತಿಸಿ ಕಳೆದ 77 ವರ್ಷಗಳಿಂದ ಮುಂಬಯಿ ಮಹಾನಗರದಲ್ಲಿ ಸಂಘವು ನಡೆಸುವ ಸಾಂಸ್ಕೃತಿಕ, ಸಾಹಿತ್ಯಿಕ ಶೈಕ್ಷಣಿಕ ಮತ್ತು ಧಾರ್ಮಿಕ ಕಾರ್ಯಕ್ರಮಗಳ ಬಗ್ಗೆ ಸಂಕ್ಷಿಪ್ತವಾಗಿ ತಿಳಿಸಿದರು.

ಖಾಲ್ಸಾ ಕಾಲೇಜು ಕನ್ನಡ ಪ್ರೇಮಿ ಮಂಡಳಿ ದತ್ತಿ ಉಪನ್ಯಾಸಕರಾಗಿ ಹವ್ಯಕ ಸಂದೇಶ ಪತ್ರಿಕೆಯ ಸಂಪಾದಕರಾಗಿರುವ ಶ್ರೀಮತಿ ಅಮಿತಾ ಎಸ್. ಭಾಗವತರು 'ಹವ್ಯಕ ಜಾನಪದ ಹಾಡುಗಳಲ್ಲಿ ಮಹಿಳಾ ಸಂಘರ್ಷ' ಎಂಬ ವಿಷಯದ ಮೇಲೆ ಉತ್ತಮವಾಗಿ ಉಪನ್ಯಾಸವನ್ನು ನೀಡಿದರು. ಅವರು ತಮ್ಮ ಉಪನ್ಯಾಸದಲ್ಲಿ ಹವ್ಯಕ ಎಂಬ ಶಬ್ದದ ವಿವರಣೆ ನೀಡಿ ಹವ್ಯಕ ಬ್ರಾಹ್ಮಣರ ಆಚಾರ ವಿಚಾರಗಳ ಬಗ್ಗೆ ವಿವರವಾಗಿ ತಿಳಿಸಿದರು. ಮಯೂರ ವರ್ಮರ ಹೆಸರು, ಮಯೂರ ವರ್ಮ ಎಂದು ಹೆಸರು ಹೇಗೆ ಬಂತು. ಮುಳಿಯ ತಿಮ್ಮಪ್ಪಯ್ಯ ಶಂಭು ಶರ್ಮ, ಇಗ್ಗಪ್ಪ ಹೆಗ್ಗಡೆ, ಕೊಡಗಿನ ಗೌರಮ್ಮ ಇವರ ಬಗ್ಗೆ ತಿಳಿಸಿದರು. ಭಾರತೀಯ ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಮಹಿಳಾ ಸಂಘರ್ಷವು ಕ್ರಾಂತಿಯ ರೂಪ ತಾಳದಿದ್ದರೂ, ಅವರ ಅಳಲು ಜಾನಪದ ಗೀತೆಗಳಲ್ಲಿ ಹೊರಹೊಮ್ಮಿವೆ ಎಂದರು. ಹವ್ಯಕ ಜಾನಪದ ಗೀತೆಗಳನ್ನು ಹಾಡಿ ನೆರೆದ ಸಾಹಿತ್ಯಾಭಿಮಾನಿಗಳ ಮನತಣಿಸಿದರು. ಅವರ ಪರಿಚಯವನ್ನು ಶ್ರೀಮತಿ ಸುಗುಣಾ ಶೆಟ್ಟಿಯವರು ಮಾಡಿದರು. ಅವರಿಗೆ ಖಾಲ್ಸಾ ಕಾಲೇಜಿನ ಹಳೆ ವಿದ್ಯಾರ್ಥಿ ಪದ್ಮನಾಭ ಶೆಟ್ಟಿ ಪುಷ್ಪಗುಚ್ಛ, ಸಂಭಾವನೆ ಮತ್ತು ಪುಸ್ತಕ ಗೌರವನೀಡಿದರು.

ದಿ. ಜಿ. ವಿ. ರಂಗಸ್ವಾಮಿ ದತ್ತಿ ಉಪನ್ಯಾಸಕರಾದ ಮಂಬಯಿಯ ನಾಟಕಕಾರ, ಸಾಹಿತಿ ಮತ್ತು ಸಂಘಟಕರಾದ ಶ್ರೀ ನಾರಾಯಣ ಶೆಟ್ಟಿ ನಂದಳಿಕೆಯವರು 'ನಾಟಕದ ಮೂಲ ಪಠ್ಯ-ರಂಗ ಪ್ರಯೋಗತೆ, ಸಾಧ್ಯತೆಗಳು' ಎಂಬ ವಿಷಯದ ಮೇಲೆ ಉಪನ್ಯಾಸ ನೀಡಿದರು. ಮುಂಬಯಿಯ ಕನ್ನಡ ಮತ್ತು ತುಳು ರಂಗಭೂಮಿಯ ಬಗ್ಗೆ ವಿವರವಾಗಿ ತಿಳಿಸಿದರು. ಅಲ್ಲದೆ ಕನ್ನಡ ಪ್ರೇಕ್ಷಕರ ಕೊರತೆ ಬಗ್ಗೆ, ರಂಗ ಪ್ರದರ್ಶನದ ಬಗ್ಗೆ ದಿಗ್ದರ್ಶಕರ ಬಗ್ಗೆ ತಿಳಿಸಿ ವಿವರವಾಗಿ ಉಪನ್ಯಾಸ ನೀಡಿದರು. ಅವರ ಪರಿಚಯವನ್ನು ಶ್ರೀ ಸುಬ್ರಾಯ ಶ್ಯಾನುಭೋಗರು ಮಾಡಿದರು. ದಿ. ಜಿ. ವಿ. ರಂಗಸ್ವಾಮಿ ದತ್ತಿ ನಿಧಿ ಪರವಾಗಿ ಸಂಘದ ಅಧ್ಯಕ್ಷರಾದ ಜಿ. ಎಸ್. ನಾಯಕರು ಪುಸ್ತಕ ಗೌರವ ಪುಷ್ಪಗುಚ್ಛ, ಸಂಭಾವನೆಯನ್ನು ನೀಡಿದರು. ಖಾಲ್ಸಾ ಕಾಲೇಜು ಕನ್ನಡ ಪ್ರೇಮಿ ಮಂಡಳಿಯ ಪರವಾಗಿ ಹಳೆ ವಿದ್ಯಾರ್ಥಿ ಪದ್ಮನಾಭ ಶೆಟ್ಟಿಯವರು ಪುಷ್ಪಗುಚ್ಛ ಮತ್ತು ಪುಸ್ತಕ ಗೌರವವನ್ನು ಸಂಘದ ಅಧ್ಯಕ್ಷರಿಂದ ಪಡೆದರು. ಇದೇ ಸಂದರ್ಭದಲ್ಲಿ ಕೆಲವು ಸಾಹಿತ್ಯಾಭಿಮಾನಿಗಳಿಗೆ ಪುಷ್ಪಗುಚ್ಛ ನೀಡಿ ಗೌರವಿಸಲಾಯಿತು. ಶ್ರೀ ಮಾಧವ ಮಾರ್ಕಂಡೆಯವರು ಪುಷ್ಪಗುಚ್ಛ ಸ್ವೀಕರಿಸಿದರು. ಕಾರ್ಯಕ್ರಮದ ನಿರ್ವಹಣೆಯನ್ನು ಸೋಮನಾಥ ಕರ್ಕೇರ ಮಾಡಿದರು. ಎಚ್. ಎಸ್. ಅಡೂರ್‌ರವರು ಧನ್ಯವಾದ ಸಮರ್ಪಣೆಯನ್ನು ಮಾಡಿದರು. ಈ ಕಾರ್ಯಕ್ರಮದ ಯಶಸ್ಸಿಗೆ ಸಂದ್ಯಾ ಪ್ರಭು, ಎಸ್. ಕೆ. ಪದ್ಮನಾಭ ಸಹಕಾರ ನೀಡಿದರು. ಲಘು ಉಪಹಾರದೊಂದಿಗೆ ಕಾರ್ಯಕ್ರಮ ಮುಕ್ತಾಯ ಗೊಂಡಿತು.

ವರದಿ : ಜಿ. ಎಸ್. ನಾಯಕ್

25ನೇ ವರ್ಷದ ಸತ್ಯನಾರಾಯಣ ಪೂಜೆಯ ವರದಿ

ಡಿಸೆಂಬರ್ 29ಕ್ಕೆ ಡೊಂಬಿವಲ್ಲಿಯ ಮರಾಠಾ ಮಂದಿರ ಹಾಲ್‌ನಲ್ಲಿ 25ನೇ ವರ್ಷದ ಸತ್ಯನಾರಾಯಣ ಪೂಜೆ ವಿಜೃಂಭಣೆಯಿಂದ ನೆರವೇರಿತು. ಬೆಳಿಗ್ಗೆ 9 ಗಂಟೆಯಿಂದಲೇ ಕಾರ್ಯಕ್ರಮ ಪ್ರಾರಂಭವಾಯಿತು. ಕಲಾ ಹಾಗೂ ರಂಗೋಲಿ ಸ್ಪರ್ಧೆ ಏರ್ಪಡಿಸಲಾಗಿತ್ತು.

12.30ಕ್ಕೆ ಮಹಾ ಮಂಗಳಾರತಿಯನ್ನು ಚಂದ್ರಶೇಖರ ಭಟ್ಟರು ನೆರವೇರಿಸಿಕೊಟ್ಟರು. ಗಣಪತಿ ಜಿ. ಹೆಗಡೆ ದಂಪತಿಗಳು ಪೂಜೆಗೆ ಕುಳಿತಿದ್ದರು. ತೀರ್ಥಪ್ರಸಾದದೊಂದಿಗೆ ಎಲ್ಲರೂ ಊಟದ ಕೋಣೆಯತ್ತ ತೆರಳಿದರು. ಬಗ್ಗೋಣ ಭಟ್ಟರ ಕೈಅಡುಗೆ ಸವಿಯುತ್ತ ಎಲ್ಲರೂ ಮುಂದಿನ ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ತಮ್ಮ ತಮ್ಮ ಸೀಟಿನಲ್ಲಿ ಆಸೀನರಾದರು.

ಮುಖ್ಯ ಅತಿಥಿಯಾಗಿ ಶ್ರೀ ಎಸ್. ವಿ. ಹೆಗಡೆ ದಂಪತಿ ಅವರನ್ನು ಸನ್ಮಾನಿಸಲಾಯಿತು. ಅವರು ಕೃಷ್ಣಮೂರ್ತಿ ಪದ್ಧತಿಯಲ್ಲಿ ಜಾತಕದ ತಿಳುವಳಿಕೆ ನೀಡಿದರು. ಸಾಂಸ್ಕೃತಿಕ ಕಾರ್ಯಕ್ರಮದೊಂದಿಗೆ ನಮ್ಮ ಕಾರ್ಯಕ್ರಮ ಸಂಪನ್ನಗೊಂಡಿತು.

*Page Donated by : **Shri Suhas Gunishastri**, Prabhadevi In the memory ofhis parents **Late Smt. Rajeshwari & Late Shri P. V. Gunishastri** , Past President, H.W.T. (DEC.-2013)*

ಓ ದೇವಿ ನಾರಾಯಣೀ ನಮ್ಮೆಲ್ಲಾ ಗ್ರಾಹಕರಿಗೆ ಉತ್ತಮ ಆರೋಗ್ಯ,
ಧೀರ್ಘ ಆಯುಷ್ಯ ಹಾಗೂ ಅತುಳ ಐಶ್ವರ್ಯವನ್ನು ಕರುಣಿಸು.

ಸನ್ಮಾನ್ಯ ಗ್ರಾಹಕರ ಗಮನಕ್ಕೆ :-

ಇಂದಿನಿಂದ ಬರುವ ಮಾರ್ಚ್ 31ರ ವರೆಗೆ ನಮ್ಮ ಕಾಂಜೀವರಂ ವಿಭಾಗದ ಎಲ್ಲಾ
ಕಾಂಜೀವರಂ ಸೀರೆಗಳಲ್ಲಿ 25% ದಿಂದ 30% Discount ಕೊಡುತ್ತಿದ್ದೇವೆ.
ನಮ್ಮ ಅಂಗಡಿಯು 21 ನೇ ವರ್ಷಕ್ಕೆ ಪಾದಾರ್ಪಣೆ ಮಾಡಲಿರುವ
ಈ ಶುಭಸಂದರ್ಭದಲ್ಲಿ ನಮ್ಮ ಎಲ್ಲಾ ಗ್ರಾಹಕರಿಗೆ ಪಾರಿತೋಷಕದ ರೂಪದಲ್ಲಿ
ಈ 25% ದಿಂದ 30% Discount ಸಿಗಲಿದೆ.

NARAYANEE silk house

EXCLUSIVE WEDDING & ALL TYPES OF SAREES

ನಮ್ಮ ಕಾಂಜೀವರಂ ವಿಭಾಗದ ಈ 25% ದಿಂದ 30% Discount ಗೆ ಸದ್ಗುಣಿ
ಗ್ರಾಹಕರ ಅದ್ಭುತವಾದ ಪ್ರತಿ ಸ್ಪಂದನ, ಸಡಗರ, ಉತ್ಸಾಹಗಳಿಗೆ ಗೌರವ ಕೊಟ್ಟು ಬಾಕಿ
ಉಳಿದಿರುವ ಗ್ರಾಹಕರಿಗೂ ಇದರ ಪ್ರಯೋಜನ ಸಿಗುವಂತಾಗಲು ನಾವು ಈ
25% ದಿಂದ 30% Discountನ ಕಾಲಾವಕಾಶವನ್ನು ಮಾರ್ಚ್ 31ರ ವರೆಗೆ ವಿಸ್ತರಿಸಿದ್ದೇವೆ.

ಸರ್ವರಿಗೂ ಸ್ವಾಗತ, ಸುಸ್ವಾಗತ



BELAPUGUTHU
CHANDRASHEKAR SHETTY

Rs. 15000/- ಕ್ಕಿಂತ ಕಮ್ಮಿ ಬೆಲೆಯ ಪ್ರತಿ ಸೀರೆಗೆ 25% Discount
Rs. 15000/- ಕ್ಕಿಂತ ಅಧಿಕ ಬೆಲೆಯ ಪ್ರತಿ ಸೀರೆಗೆ 30% Discount

ಬರೋಕಿಗ್ ವೆರ್ಸಾ, ವೆಪಲಾ
ಸಲೀಸ್‌ಡೇ ಬರೊಬ್ಬಿ

1st & 2nd Floor, Indraprasth Shopping Centre,
Near Railway Station, Borivali (West),
Mumbai - 400 092. Tel : 28017156 / 28633508

Mob : 9867787712

ವಿವಿಧ ಆಟ, ಕಣ್ತಣಿಸುವ ನೋಟ

RNI NO. MAHBIL / 2000 / 746,
Postal R.NO. MH/MR/N/161/MBI/2012-2014

Posted at Mumbai Patrika Channel Stg. Office Mumbai-400 001
Date of Publication : 1st of every month

Date of Posting :
2nd, 3rd of every month

If undelivered, please return to :
HAVYAKA WELFARE TRUST
B-207, Valmiki Apts., Near Pharmacy College,
Sundar Nagar, Kalina, Vidyanagari P. O.,
Mumbai - 400 098. ✆ 2665 2591
E-mail : havyakamumbai@hotmail.com
Visit : www.havyakamumbai.com

Published by Narayan Akadas R.
for Havyaka Welfare Trust, Mumbai - 400 098.
being printed at M/s. Navin Printers, Mumbai - 400 016.
Hon. Editor : **Smt. Amita S. Bhagwat**

REGISTERED NEWSPAPER

To,